# ಬೃಹಚ್ಚರಣ

**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಕೆ.ಸಿ. ನಟರಾಜನ್ | ಸಂಚಾಲಕರು |
| ವೈ.ಜಿ. ಗಿರಿಶಾಸ್ತ್ರಿ | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಎಸ್. ಮಧುಸೂದನ | ಗೌ॥ ಸಂಪಾದಕ |

ಸಂಪುಟ : 4 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ – ಮಾರ್ಚ್ 2014




ಅರ್ಪಣೆ

ಬೃಹಚ್ಚರಣ

ಈ ಸಂಚಿಕೆಯನ್ನು ನಮ್ಮ ಜನಾಂಗದ ಹಿರಿಯ, ನಾಗೇಶ್ವರಕ್ಷೇತ್ರದ ಪುರೋಭಿವೃದ್ಧಿಗೆ ಶ್ರಮಿಸಿದ **ಡಾ॥ ಕೆ.ಎಲ್. ದಾನಪ್ಪ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳಿಗೆ ನಮಸ್ಕಾರ.*

ಬೃಹಚ್ಚರಣ ಬಂಧುಗಳಿಗೆ 'ಜಯನಾಮ' ಸಂವತ್ಸರದ ಹಾರ್ದಿಕ ಶುಭಾಶಯಗಳು. ನಮ್ಮ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ತಮಗೂ ಮತ್ತು ತಮ್ಮ ಕುಟುಂಬದವರಿಗೂ ದೇವರು ಸಕಲ ಸನ್ಮಂಗಳ ನೀಡಲೆಂದು ಹಾರೈಸುತ್ತೇನೆ.

5–3–2014ರಂದು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ಅಚ್ಚುಕಟ್ಟಾಗಿ ನಡೆದ ನಾಗಾರಾಧನೆ ಸಮಾರಂಭಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಸಂಘದ ಬಂಧುಗಳಿಗೆ, ಸ್ವಯಂ ಸೇವಕರಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರಿಗೆ, ವೇದಬ್ರಹ್ಮ ಶ್ರೀ ನಂಜುಂಡ ದೀಕ್ಷಿತರ ಕುಟುಂಬದ ಸದಸ್ಯರಿಗೆ ಚಿರಋಣಿ.

ಈ ಸಂದರ್ಭದಲ್ಲಿ 2014–15ರ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಲಾಯಿತು. ಇದರ ಪ್ರಾಯೋಜಕರಿಗೆ, ಕಾರ್ಯಕಾರಿ ಸಮಿತಿ ಆಭಾರಿ. ಎಂದಿನಂತೆ ಶ್ರೀ ಶಿವಪ್ರಸಾದ್ ಕುಟುಂಬ, ಶ್ರೀ ಶೇಷಾಚಲಂ ಕುಟುಂಬದವರು ಪಾನಕ, ಕೋಸಂಬರಿ, ಮಜ್ಜಿಗೆ, ಹುಳಿಅವಲಕ್ಕಿ ಪ್ರಸಾದವನ್ನು ಬಂದ ಎಲ್ಲಾ ಭಕ್ತಾದಿಗಳಿಗೆ ವಿತರಿಸಿದರು.

ಮಹಾಪೋಷಕರಾದ ಬಿ.ಎಸ್.ಕೃಷ್ಣಮೂರ್ತಿ, ಉಮೇಶ್, ಕೆ. ಶ್ರೀಕಂಠೇಶ್ವರ್, ಬೆಟ್ಟಕೋಟೆ ರಾಮಸ್ವಾಮಿ, ಸೋಮಶೇಖರ್‌ರವರಲ್ಲದೆ ಶ್ರೀನಿವಾಸಮೂರ್ತಿಯವರು ಸಂಘದ ಮೇಲೆ ಅಭಿಮಾನವಿಟ್ಟು ದಾನಿಗಳಾಗಿರುವುದಕ್ಕೆ ಕೃತಜ್ಞತೆಗಳು. ಅನ್ನಸಂತರ್ಪಣಾ ನಿಧಿಗೆ ಧನಸಹಾಯ ನೀಡಿರುವ ಪ್ರತಿಯೊಬ್ಬರಿಗೂ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

'ಬೃಹಚ್ಚರಣ' ಸಂಪಾದಕ ಪ್ರೊ. ಶ್ರೀ ಮಧುಸೂದನರವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಸರ್ಕಾರ, ಸಾಹಿತ್ಯ ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸುವುದಕ್ಕೆ ಕಾರ್ಯಕಾರಿ ಸಮಿತಿಯು ಸಂತೋಷ ವ್ಯಕ್ತಪಡಿಸಿ, ಶುಭ ಕೋರುತ್ತದೆ.

'ಬೃಹಚ್ಚರಣ' ಸಮುದಾಯದ ಪ್ರಾತಃಸ್ಮರಣೀಯರಾದ ಶ್ರೀ ಡಿ.ವಿ. ಗುಂಡಪ್ಪನವರ 127ನೇ ಹುಟ್ಟುಹಬ್ಬದ (17–3–1887) ಸವಿನೆನಪುಗಳು.



ನಿಮ್ಮಲ್ಲೊಬ್ಬ


■ **ಎಸ್. ಸೋಮಸುಂದರ**

## ಸಂಚಾಲಕೀಯ

**'ಬೃಹಚ್ಚರಣ'** ವಾರ್ತಾ ಪತ್ರಿಕೆಯ ಸಂಪಾದಕ ಶ್ರೀ ಕೆ.ಎಸ್.ಮಧುಸೂದನರವರು ವೈದ್ಯರ ಸಲಹೆಯಂತೆ ವಿಶ್ರಾಂತಿಯಲ್ಲಿದ್ದು, ಸುಧಾರಿಸಿ ಮತ್ತೆ ನಮ್ಮೊಂದಿಗೆ ಬರುವವರೆಗೂ, ಸಂಪಾದಕ ಮಂಡಲಿಯೇ ಸಂಚಿಕೆಗಳನ್ನು ಸಮಯಕ್ಕೆ ಸರಿಯಾಗಿ ತಮಗೆ ತಲುಪಿಸುವ ಏರ್ಪಾಡು ಮಾಡಲಿದೆ. ಶ್ರೀಯುತ ಮಧುಸೂದನರವರು ಆದಷ್ಟು ಬೇಗ ಚೇತರಿಸಿಕೊಳ್ಳಲೆಂದು, ಸಂಘ ಶುಭ ಹಾರೈಸುತ್ತದೆ. ತಮ್ಮ ಪತ್ರ ವ್ಯವಹಾರ–ಲೇಖನ–ಚಿತ್ರಗಳನ್ನು ಸಂಘದ ಅಧ್ಯಕ್ಷ–ಪ್ರಧಾನ ಸಂಪಾದಕ ಅಥವಾ ಕಾರ್ಯದರ್ಶಿಯವರಿಗೆ ತಲುಪಿಸಲು ಕೋರಿಕೆ.

ನಮ್ಮ ಬಂಧುಗಳಲ್ಲೇ ಸೃಜನಶೀಲ ಲೇಖಕರು, ಕಥೆ, ಕವನ, ಬರಹಗಾರರಿರುವುದರಿಂದ ಸಂಗ್ರಹ ಲೇಖನಗಳನ್ನು ಕಳುಹಿಸದಿರಲು ಕೋರಿಕೆ.

ಅಧ್ಯಕ್ಷರ ಸೂಚನೆಯಂತೆ ಲೇಖಕಿ, ಧಾರ್ಮಿಕ ಚಿಂತಕಿ ಶ್ರೀಮತಿ ಲಲಿತಾ ರಮೇಶ್‌ರವರು, ನಮ್ಮನ್ನಗಲಿದ ಕುಮಾರಿ ಅಚಲಾ ಬದಲಿಗೆ ಸಂಪಾದಕ ಮಂಡಲಿಯಲ್ಲಿರುತ್ತಾರೆ.



■ **ಕೆ.ಸಿ.ನಟರಾಜ್**
ಸಂಚಾಲಕ



ಕಿತ್ತಗಾನಹಳ್ಳಿಯ ನಾಗೇಶ್ವರಕ್ಷೇತ್ರದಲ್ಲಿ 5–3–2014ರಂದು ಶ್ರೀ ಸುಬ್ರಮಣ್ಯಸ್ವಾಮಿ ಉತ್ಸವ

## ಮೈ.ಮಂ.ದ್ರಾ.ಬ್ರ. ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : ಎಸ್. ಸೋಮಸುಂದರ, 9900113298
ಉಪಾಧ್ಯಕ್ಷರು : ಕೆ.ಬಿ. ಮುರಳಿ, 9448044164
ಕೆ. ಮಂಜುನಾರಾಯಣ್, 9886114279
ಕಾರ್ಯದರ್ಶಿ : ವಿ.ಎಸ್. ಮಣಿ, 9845055582
ಸಹಕಾರ್ಯದರ್ಶಿ : ವಿ. ಅರುಣ, 9880166001
ಖಜಾಂಚಿ : ಎಸ್. ಸತ್ಯನಾರಾಯಣ, 9980945699
ಲೆಕ್ಕಪರಿಶೋಧಕರು : ಎಚ್.ಕೆ. ಶಶಿಧರ್, 9845173766

ಸದಸ್ಯರು : ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಪಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್

ಸಲಹೆ : ಕೆ.ಎಸ್. ಮಧುಸೂದನ, 9902145359

### ಶ್ರೀಯುತ ಗೌರವ ಸದಸ್ಯರು

ಶ್ರೀ ಬಿ.ಎಸ್. ಪದ್ಮನಾಭ (HM 01)
ಶ್ರೀ ಹೆಚ್.ಕೃಷ್ಣಸ್ವಾಮಿ (HM 02)
ಶ್ರೀ ಟಿ.ಎಸ್. ಕೃಷ್ಣನ್ (HM 03)
ಶ್ರೀ ಆರ್.ಕೆ. ಶಿವಪ್ರಸಾದ್ (HM 04)

### ಮಹಾ ಪೋಷಕರು

ಶ್ರೀ ಬಿ.ಎಸ್. ಕೃಷ್ಣಮೂರ್ತಿ
ಶ್ರೀ ಉಮೇಶ್ ಸೋಮಶೇಖರ್
ಶ್ರೀ ಕೆ. ಶ್ರೀಕಂಠೇಶ್ವರ್ (ಸರ್ಜಾಪುರ)
ಶ್ರೀ ಬೆಟ್ಟಕೋಟೆ ರಾಮಸ್ವಾಮಿ ಮತ್ತು ಸಹೋದರರು

### ಪೋಷಕರು

ಶ್ರೀ ಅಶೋಕ್‌ಕುಮಾರ್ (P 076)
ಶ್ರೀ ಡಾ॥ ಜಿ. ಸ್ವಾಮಿನಾಥನ್ (P 077)
ಶ್ರೀ ಎಲ್. ವೆಂಕಟೇಶ್

### ಹೊಸ ಸದಸ್ಯರು

ಶ್ರೀ ಚಂಪಕಧಾಮ ಟಿ.ಎಲ್. (M-420)
ಶ್ರೀಮತಿ ಭಾಗ್ಯಲಕ್ಷ್ಮೀ ಸಿ. (M-421)
ಶ್ರೀ ಪದ್ಮಾಜಗನ್ನಾಥ್ (M-422)
ಶ್ರೀ ನಾಗಪದ್ಮ ಎಸ್.ನಾರಾಯಣ್ (M-423)
ಶ್ರೀಮತಿ ಲೀಲಾವತಿ (M-424)
ಶ್ರೀ ವೆಂಕಟೇಶ್ ಎಸ್. (M-425)
ಶ್ರೀಮತಿ ಪದ್ಮಿನಿ ಆರ್.ಅಜೇಯ್ (M-426)
ಶ್ರೀ ಪದ್ಮನಾಭನ್
ಶ್ರೀ ಎಸ್. ವಿಶ್ವನಾಥನ್
ಶ್ರೀ ಕೆ.ಬಿ.ಎಸ್. ಶರ್ಮ
ಶ್ರೀ ಸುಬ್ರಮಣ್ಯ ಬಿ.
ಶ್ರೀಮತಿ ಗಿರಿಜಾದೇವಿ



## ಡಾ॥ ಕೆ.ಎಲ್. ದಾನಪ್ಪ

ದಿವಂಗತ ಶ್ರೀ ಲಕ್ಷ್ಮೀನಾರಾಯಣಪ್ಪ, ಶ್ರೀಮತಿ ಸುಬ್ಬಮ್ಮನವರ ಪುತ್ರ ಡಾ॥ ಶ್ರೀ ಕೆ.ಎಲ್. ದಾನಪ್ಪನವರು 18–7–1900ರಂದು ಜನಿಸಿದರು. ತಮ್ಮ ಅಣ್ಣ ಕೆ. ಪದ್ಮನಾಭಯ್ಯನವರ ಮಾರ್ಗದರ್ಶನ ದಲ್ಲಿ ಎಲ್ಲಾ ಧಾರ್ಮಿಕ ಕಾರ್ಯಚಟುವಟಿಕೆಗಳಲ್ಲಿ ಚಿಕ್ಕಂದಿನಿಂದಲೇ ಭಾಗವಹಿಸುತ್ತಿದ್ದರು. 1939ರಲ್ಲಿ ನಾಗೇಶ್ವರಕ್ಷೇತ್ರದ ಜೀರ್ಣೋದ್ಧಾರ ಕಾರ್ಯ ಪ್ರಾರಂಭಿಸಿ ಅಂತೆಯೇ ದೇವತಾ ಕಾರ್ಯಕ್ರಮಗಳು ಅನ್ನದಾನಾದಿ, ಜನಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಶ್ರೀಯುತರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮನವರೂ ಕೂಡ ಯಜಮಾನರು ನಡೆದ ಧಾರ್ಮಿಕ ಹಾದಿಯಲ್ಲೇ ನಾಗೇಶ್ವರ ಕ್ಷೇತ್ರದ ಉನ್ನತಿಗಾಗಿ ದುಡಿದಿರುತ್ತಾರೆ. ತಮ್ಮ ಇಳಿವಯಸ್ಸಿನಲ್ಲಿಯೂ ಸಂಘದ ಕಾರ್ಯಚಟುವಟಿಕೆಗಳನ್ನು ಕಂಡು ಸಂತೋಷ ಪಟ್ಟು ಹೃದಯ ತುಂಬಿ ಆಶೀರ್ವದಿಸುತ್ತಿದ್ದರು.

24–4–1974ರಂದು ಶ್ರೀಯುತರು ಸ್ವರ್ಗಸ್ಥ ರಾಗುವವರೆಗೂ ನಲವತ್ತು ವರ್ಷಗಳ ಕಾಲ ಸುದೀರ್ಘವಾಗಿ ಬೆಂಗಳೂರು **ಸೇಂಟ್ ಮಾರ್ಥಾಸ್ ಆಸ್ಪತ್ರೆಯ** ಮುಖ್ಯಸ್ಥರಾಗಿ ಬಡಜನರ ಆರಾಧ್ಯ ದೈವವಾಗಿ, ಸಹೋದ್ಯೋಗಿಗಳ ಸಹೃದಯ ಅಣ್ಣನಾಗಿ, ದುಡಿದ ಮಹಾನ್ ಚೇತನ ದಿವಂಗತ ಡಾ॥ ದಾನಪ್ಪನವರು ಬೃಹಚ್ಚರಣ ಬಂಧುಗಳೆಲ್ಲಾ ನೆನಪಿಸಿಕೊಳ್ಳ ಬೇಕಾದ ಹಿರಿಯ ವ್ಯಕ್ತಿ.

ಈ ಸಂದರ್ಭದಲ್ಲಿ ದಾನಪ್ಪನವರ ಕುಟುಂಬ ಸದಸ್ಯರಾದ ಶ್ರೀ ಶ್ರೀನಿವಾಸಮೂರ್ತಿ ಸಂಘದ "ಅನ್ನ ಸಂತರ್ಪಣಾ" ನಿಧಿಗಾಗಿ ಹತ್ತು ಸಾವಿರ ಮತ್ತು ಶ್ರೀ ಎಂ.ಪಿ.ರಂಗನಾಥ್ (ಸಿಡ್ನಿ) ಐದು ಸಾವಿರ ರೂಪಾಯಿಗಳ ದೇಣಿಗೆ ಕೊಟ್ಟಿರುವುದಕ್ಕೆ ಸಂಘದ ಕಾರ್ಯಕಾರಿ ಸಮಿತಿಯು ಆಭಾರಿಯಾಗಿ, ಶುಭ ಹಾರೈಸುತ್ತದೆ.

■ ಕೆ.ಸಿ. ನಟರಾಜ್

### ದಾನಿಗಳು

ಬೆಟ್ಟಕೋಟೆ ಶ್ಯಾನುಭೋಗ್ ಕುಟುಂಬದ ಸಹೋದರರಾದ ಶ್ರೀ ಬಿ.ಎ. ರಾಮಸ್ವಾಮಿ, ಶ್ರೀ ಬಿ.ಎ. ಈಶ್ವರಮೂರ್ತಿ, ಶ್ರೀ ಬಿ.ಎ. ಲಕ್ಷ್ಮಣಶರ್ಮ ಮತ್ತು ಶ್ರೀ ಸೂರ್ಯಪ್ರಕಾಶ ಇವರುಗಳು ತಮ್ಮ ಪೂಜ್ಯ ಮಾತಾಪಿತೃಗಳಾದ

**ಶ್ರೀ ಅಶ್ವತ್ಥನಾರಾಯಣರಾವ್ ಮತ್ತು ಶ್ರೀಮತಿ ರುಕ್ಕಮ್ಮ**

ಇವರುಗಳ ಸವಿ ನೆನಪಿನಲ್ಲಿ **ರೂ. 25,000/–**ಗಳನ್ನು ಶಾಶ್ವತ ಅನ್ನದಾನ ನಿಧಿಗೆ ದೇಣಿಗೆ ನೀಡಿರುತ್ತಾರೆ. ಬೆಟ್ಟಕೋಟೆ ಕುಟುಂಬಕ್ಕೆ ಸಂಘದ ಶುಭಾಶಯಗಳು.

# ವಾರ್ತಾ ಚಿತ್ರಗಳು



ಸಂಘದ ಕಾರ್ಯಕಾರಿ ಸಮಿತಿ 'ಆವತಿ' ಕ್ಷೇತ್ರದಲ್ಲಿ



ಪೋಷಕ ಗುಂಡಪ್ಪನವರಿಗೆ 70ರ ಗೌರವ



ಸರ್ಜಾಪುರದ ಶ್ರೀ ಶ್ರೀಕಂಠೇಶ್ವರರ ಕುಟುಂಬ ಚಿಕ್ಕತಿರುಪತಿಯ ಕಲ್ಯಾಣೋತ್ಸವದಲ್ಲಿ



ಬೆಂಗಳೂರು ಕೋಟೆ ಶ್ರೀನಿವಾಸ ದೇವರ ಪ್ರಾಕಾರೋತ್ಸವ



ನಾಗಾರಾಧನೆಯಲ್ಲಿ ಸಂಘದ 2014–15ರ ಕ್ಯಾಲೆಂಡರ್ ಬಿಡುಗಡೆ



ನಾಗಾರಾಧನೆಯಲ್ಲಿ ರಾಜಪುರ ಕುಟುಂಬದವರಿಂದ ಪ್ರಸಾದ ವಿತರಣೆ

ಛಾಯಾಚಿತ್ರ : ನಟರಾಜ್ – ಶಿವಕುಮಾರ್



ನಾಗಾರಾಧನೆಯಲ್ಲಿ ಮಹಿಳಾ ಬಂಧುಗಳಿಂದ ವಿಷ್ಣು ಸಹಸ್ರನಾಮ



ನಾಗಾರಾಧನೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಭಜನಾ ಕಾರ್ಯಕ್ರಮ



# ನಾಗಾರಾಧನೆ
## ಒಂದು ಧಾರ್ಮಿಕ ಸಮಾರಂಭ

ಆನೇಕಲ್ಲು ತಾಲ್ಲೂಕು ಕಿತ್ತಿಗಾನಹಳ್ಳಿ ನಾಗೇಶ್ವರಕ್ಷೇತ್ರದಲ್ಲಿ ಇದೇ 5-3-14ರ ಬುಧವಾರದಂದು ಬೃಹಚ್ಚರಣ ಸಂಘದವರು ಏರ್ಪಡಿಸಿದ್ದ ನಾಗಾರಾಧನೆ ಧಾರ್ಮಿಕ ಸಮಾರಂಭವು ಹಿಂದಿನ ವರ್ಷಗಳಿಗಿಂತ ಅಚ್ಚುಕಟ್ಟಾಗಿ ನೆರವೇರಿದ್ದು ಸಂತೋಷದ ವಿಷಯ.

ಕ್ಷೇತ್ರದ ಶ್ರೀ ಶ್ರೀನಿವಾಸ ದೇವರ ಅಭಿಷೇಕದೊಂದಿಗೆ ಪೂಜಾ ಕಾರ್ಯಕ್ರಮಗಳು ಪ್ರಾರಂಭವಾದವು. ಕ್ಷೇತ್ರದ ಶ್ರೀ ಸುಬ್ರಹ್ಮಣ್ಯ ದೇವರ ಅಲಂಕಾರಿಕ ಉತ್ಸವ ನಾಗರಕಟ್ಟೆಗೆ ಬಂದು ಪ್ರತಿಷ್ಠಾಪಿಸಿದ ನಂತರ ನಮ್ಮ ಬೃಹಚ್ಚರಣ ಬಂಧುಗಳು ನಾಗಪ್ಪ ಶಿಲೆಗಳಿಗೆ ಹಾಲು, ತುಪ್ಪ, ನೀರು ಪೂಜಾ ದ್ರವ್ಯಗಳಿಂದ ಭಕ್ತಿ-ಶ್ರದ್ಧೆಯಿಂದ ಪೂಜೆ ಮಾಡಿ, ನಮ್ಮವರೇ ಆದ ಬ್ರಹ್ಮಚಾರಿಗಳಿಗೆ ಪಾದಪೂಜೆ, ವಸ್ತ್ರದಾನ, ದಕ್ಷಿಣೆಗಳನ್ನು ನೀಡಿ ಅವರಲ್ಲಿ ಬಾಲಸುಬ್ರಹ್ಮಣ್ಯನನ್ನು ಕಂಡುಕೊಂಡರು.

ಶ್ರೀ ಕ್ಷೇತ್ರದ ಆಗಮಿಕ ವೇದಬ್ರಹ್ಮ ಶ್ರೀ ನಂಜುಂಡ ದೀಕ್ಷಿತರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬೃಹಚ್ಚರಣ ಸಂಘವು ತಂದಿರುವ 2014-15ರ ಪಾಕೇಟ್ ಮತ್ತು ವಾರ್ಷಿಕ ಕ್ಯಾಲೆಂಡರ್ ಬಿಡುಗಡೆಯಾಯಿತು. ಬೃಹಚ್ಚರಣ ಮಹಿಳೆಯರಿಂದ ವಿಷ್ಣು ಸಹಸ್ರನಾಮ ಪಠಣ ನಡೆದಿದ್ದು ಮಂಗಳಕರವಾಗಿತ್ತು.

ತನಿ ಎರೆದ ನಂತರ ಎಲ್ಲಾ ಭಕ್ತಾದಿಗಳಿಗೆ ರಾಜಾಪುರ ಶೇಖ್‌ದಾರ್ ಲೇಟ್ ಕೃಷ್ಣಮೂರ್ತಿ ಕುಟುಂಬದವರಿಂದ ಪಾನಕ, ಕೋಸಂಬರಿ, ಮಜ್ಜಿಗೆ ಹಾಗೂ ದಿವಂಗತ ರಾಮಚಂದ್ರಯ್ಯ, ಗೋಪಾಲಯ್ಯನವರ ಮಕ್ಕಳಿಂದ ಹುಳಿ ಅವಲಕ್ಕಿ ಪ್ರಸಾದವನ್ನು ವಿತರಿಸಲಾಯಿತು.

ಪೂಜಾ ವಿಧಿಗಳೆಲ್ಲ ನೆರವೇರಿದ ನಂತರ ಭೋಜನ ಪ್ರಸಾದವನ್ನು ಭಕ್ತಾದಿಗಳು ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಸಂಘದ ಸದಸ್ಯರಾದ ಶ್ರೀ ಶೇಷಾಚಲ ಕುಟುಂಬದವರು ಲೇಟ್ ಶ್ರೀ ಬಿ. ಕೆ. ಲಕ್ಷ್ಮೀನಾರಾಯಣರವರ ಶತಾಬ್ಧಿಕ ವರ್ಷದ ಸವಿನೆನಪಿಗಾಗಿ ಹೋಳಿಗೆಯನ್ನು ವಿತರಿಸಿದರು. ಸಂಘವು ಭಾಗವಹಿಸಿದ ಪ್ರತಿಯೊಬ್ಬರಿಗೂ ವಡೆ ಪ್ರಸಾದವನ್ನು ವಿತರಿಸಿದ್ದು ಈ ವರ್ಷದ ವಿಶೇಷವಾಗಿತ್ತು.

ಹಿಂದಿನ ವರ್ಷಗಳಲ್ಲಿ ಹೆಚ್ಚಾಗಿ ಹಿರಿಯರೇ ಭಾಗವಹಿಸುತ್ತಿದ್ದ ಈ ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಮ್ಮ ಸಮುದಾಯದ ಯುವಕರು ಹಾಗೂ ಕೌಂಡಿಣ್ಯ ಗೋತ್ರವಲ್ಲದವರು ಕೂಡ ಭಾಗವಹಿಸಿದ್ದು 'ಬೃಹಚ್ಚರಣ' ಸಂಘದ ಮೇಲೆ ಬಂಧುಗಳು ಇಟ್ಟಿರುವ ವಿಶ್ವಾಸ ತೋರಿಸುತ್ತದೆ. ಅಚ್ಚುಕಟ್ಟಾಗಿ ಸಮಾರಂಭ ನೆರವೇರಿದ್ದಕ್ಕೆ ಮುಖ್ಯ ಕಾರಣಕರ್ತರಾದ ಕಾರ್ಯದರ್ಶಿ ಶ್ರೀ ವಿ.ಎಸ್.ಮಣಿ, ಖಜಾಂಚಿ ಶ್ರೀ ಸತ್ಯನಾರಾಯಣ್, ಶ್ರೀ ಟಿ.ಎಸ್. ಮಣಿ ಹಾಗೂ ಸಂಘದ ಸ್ವಯಂ ಸೇವಕರನ್ನು ಸಂಘದ ಅಧ್ಯಕ್ಷರಾದ ಸೋಮಸುಂದರ್ ಅವರು ಕೃತಜ್ಞತಾಪೂರ್ವಕವಾಗಿ ಅಭಿನಂದಿಸಿದ್ದು ಎಲ್ಲರಿಗೂ ಮೆಚ್ಚುಗೆಯಾಯಿತು.

ಸಮಾರಂಭದಲ್ಲಿ ಯಾವುದೇ ರೀತಿಯ ಕಹಿ ಘಟನೆ ನಡೆಯದೆ ಶಿಸ್ತಿನಿಂದ ಮುಗಿದಿದ್ದು ಕಾರ್ಯಕ್ರಮಕ್ಕೆ ಮೆರಗು ಕೊಟ್ಟಂತಿತ್ತು.



■ ಲಲಿತಾ ರಮೇಶ್

## ಅಮೃತ ಬಿಂದುಗಳು

### ಬದುಕಿದ್ದೂ ವ್ಯರ್ಥ

ಗುಣವಿಲ್ಲದಿದ್ದರೆ – ರೂಪ ವ್ಯರ್ಥ
ನಮ್ರತೆಯಿಲ್ಲದಿದ್ದರೆ – ವಿದ್ಯೆ ವ್ಯರ್ಥ
ಉಪಯೋಗಿಸದಿದ್ದರೆ – ಇರುವ ಧನ ವ್ಯರ್ಥ
ಹಸಿವೆಯಿಲ್ಲದಿದ್ದರೆ – ಭೋಜನ ವ್ಯರ್ಥ
ಪ್ರಜ್ಞೆಯಿಲ್ಲದಿದ್ದರೆ – ಪ್ರತಿಭೆ ವ್ಯರ್ಥ
ಗುರಿಯಿಲ್ಲದಿದ್ದರೆ – ಸಾಧನೆ ವ್ಯರ್ಥ
ಆತ್ಮವನ್ನು ಅರಿಯದಿದ್ದರೆ – ಜೀವನ ವ್ಯರ್ಥ

### ಮನುಷ್ಯತ್ವವನ್ನು ತಿನ್ನುವ

ಕ್ರೋಧ – ಬುದ್ಧಿಯನ್ನು ತಿನ್ನುತ್ತದೆ
ಅಹಂಕಾರ – ಜ್ಞಾನವನ್ನು ತಿನ್ನುತ್ತದೆ
ಪ್ರಾಯಶ್ಚಿತ್ತ – ಪಾಪವನ್ನು ತಿನ್ನುತ್ತದೆ
ಮೋಹ – ಮರ್ಯಾದೆಯನ್ನು ತಿನ್ನುತ್ತದೆ
ಲಂಚ – ಗೌರವವನ್ನು ತಿನ್ನುತ್ತದೆ
ಚಿಂತೆ – ಆಯುಷ್ಯವನ್ನು ತಿನ್ನುತ್ತದೆ.

### ಮಾತು

ಕಡಿಮೆ ಮಾತನಾಡಿ
ಮೆಲ್ಲಗೆ ಮಾತನಾಡಿ
ಮಧುರವಾಗಿ ಮಾತನಾಡಿ
ಪ್ರೀತಿಯಿಂದ ಮಾತನಾಡಿ
ಸ್ವಲ್ಪ ಯೋಚಿಸಿ ಮಾತನಾಡಿ



■ ಬಿ. ಶೇಷಾಚಲ

## ಕಿತ್ತಿಗಾನಹಳ್ಳಿಯಲ್ಲಿ 5-3-2014ರಂದು ನಡೆದ ನಾಗಾರಾಧನೆಯ ಛಾಯಾಚಿತ್ರಗಳು






ನಾಗರಾಧನೆಯಂದು ತನಿಎರೆಯುತ್ತಿರುವ ಬೃಹಚ್ಚರಣ ಬಂಧುಗಳು






ನಾಗರಾಧನೆಯಂದು ಪ್ರಸಾದ ಸ್ವೀಕರಿಸುತ್ತಿರುವ ಬೃಹಚ್ಚರಣ ಬಂಧುಗಳು

ಛಾಯಾಚಿತ್ರ : ನಟರಾಜ್ – ಶಿವಕುಮಾರ್



# ಪಕ್ಷಿ ವೀಕ್ಷಣೆ

ಪಕ್ಷಿಗಳು ಪುಟ್ಟ ಗಾತ್ರದ್ದಾಗಿರಲಿ ದೊಡ್ಡ ಗಾತ್ರದ್ದಾಗಿರಲಿ ಪ್ರಕೃತಿಯ ಅದ್ಭುತ ಸೃಷ್ಟಿ ಎಂಬುದರಲ್ಲಿ ಸಂಶಯವಿಲ್ಲ. ಅವು ತಮ್ಮ ವೈವಿಧ್ಯಮಯವಾದ ಇಂಚರದಿಂದ ಚೈತನ್ಯದಾಯಕ ಹಾರಾಟದಿಂದ ಆಕರ್ಷಕ ಬಣ್ಣದಿಂದ ನಿಸರ್ಗಕ್ಕೆ ಜೀವ ತುಂಬುವ ಪುಟ್ಟ ಜೀವಿಗಳು.

ಪ್ರತಿದಿನ ನಮ್ಮ ಅಂಗಳದಲ್ಲಿ, ಮನೆಯ ಸೂರಿನಲ್ಲಿ ಅಥವಾ ಸಮೀಪದ ಮರಗಳಲ್ಲಿ ಗೂಡು ಕಟ್ಟಿ ವಾಸಿಸುವ ಹಕ್ಕಿಗಳು ಕೆಲವಾದರೆ, ಊರಾಚೆಗಿನ ತೋಪುಗಳಲ್ಲಿ ತೋಟಗಳಲ್ಲಿ ಕಾಡುಗಳಲ್ಲಿ ವಾಸಿಸುವ ಪಕ್ಷಿಗಳು ಹಲವಾರು. ಅವುಗಳ ಬಣ್ಣ, ಆಕಾರ, ದನಿ, ಸ್ವಭಾವ, ನೆಲೆ, ಆಹಾರ, ಗೂಡುಕಟ್ಟುವ ಹಾಗೂ ಮರಿಗಳನ್ನು ಸಾಕುವ ವಿಧಾನ ಸಹ ವೈವಿಧ್ಯಮಯ.

ಪಕ್ಷಿ ವೀಕ್ಷಣೆ ಕುತೂಹಲಕಾರಿಯಾದ, ಹೆಚ್ಚು ದುಬಾರಿಯಲ್ಲದ, ಪರಿಸರದ ಬಗ್ಗೆ ಪಕ್ಷಿಗಳ ಬಗ್ಗೆ ಆಸಕ್ತಿಯನ್ನು, ಪ್ರೀತಿಯನ್ನು ಮತ್ತಷ್ಟು ಹೆಚ್ಚಿಸುವ ಹವ್ಯಾಸ. ಇದನ್ನು ಒಂದು ಅಧ್ಯಯನ ಎಂದು ಹೇಳಬಹುದು. ಪಕ್ಷಿ ವೀಕ್ಷಣೆಗೆ ಬೇಕಾಗುವ ವಸ್ತುಗಳು ಸಹ ತೀರಾ ಸಾಮಾನ್ಯವಾದುವು. ಒಂದು ನೋಟ್ ಪುಸ್ತಕ, ಲೇಖನಿ, ದುರ್ಬೀನು. ತಾಳ್ಮೆ ಅಗತ್ಯ. ಪಕ್ಷಿ ವೀಕ್ಷಣೆಯಲ್ಲಿ ಮಕ್ಕಳೂ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು.

ಮನೆಯಂಗಳದಿಂದಲೇ ಪಕ್ಷಿ ವೀಕ್ಷಣೆ ಪ್ರಾರಂಭಿಸಬಹುದು. ನಗರೀಕರಣದ ಪರಿಣಾಮವಾಗಿ ಪಕ್ಷಿಗಳು ಕಾಣಿಸುವುದು ಅಪರೂಪವಾಗಿರಬಹುದು. ಆದರೂ ಮರಗಳ ಗುಂಪಿನಲ್ಲಿ, ಕೆರೆಕಟ್ಟೆಗಳ ಸಮೀಪ, ಟೆಲಿಗ್ರಾಫ್ ತಂತಿಗಳ ಮೇಲೆ ಕುಳಿತ ಹಕ್ಕಿ ಸಾಲನ್ನು ನೋಡಬಹುದು. ಸಹಜವಾಗಿಯೇ ಪಕ್ಷಿಗಳಿಗೆ ಮನುಷ್ಯರ ಬಗ್ಗೆ ಅಂಜಿಕೆ ಇರುತ್ತದೆ. ಅವು ತಮ್ಮಷ್ಟಕ್ಕೆ ಇರಬಯಸುತ್ತವೆ. ಕಿರುಕುಳವನ್ನು ಸಹಿಸಲಾರವು. ಆದುದರಿಂದ, ಸಾಧ್ಯವಾದಷ್ಟು ಮರೆಯಲ್ಲಿ ನಿಂತು, ಅವುಗಳ ಏಕಾಂತತೆಗೆ ಭಂಗವಾಗದಂತೆ, ತುಸು ದೂರದಿಂದಲೇ ಪಕ್ಷಿವೀಕ್ಷಣೆ ಮಾಡುವುದು ಒಳ್ಳೆಯದು. ಒಳ್ಳೆ ಕ್ಯಾಮರಾದಿಂದ ಚಿತ್ರೀಕರಿಸಿದರೆ ನೆನಪು ಉಳಿಯುತ್ತದೆ.

ಪಕ್ಷಿಗಳು ಗೂಡು ಕಟ್ಟುವುದನ್ನು, ಆಹಾರ ಸಂಗ್ರಹಿಸುವುದನ್ನು, ಸಲ್ಲಾಪ ನಡೆಸುವುದನ್ನು, ಮೊಟ್ಟೆಗಳನ್ನು ಜೋಪಾನ ಮಾಡುವುದನ್ನು, ಕಾವು ಕೊಡುವುದನ್ನು, ಮರಿಗಳಿಗೆ ಗುಟುಕು ನೀಡುವುದನ್ನು, ಅಪಾಯದ ಸಂದರ್ಭದಲ್ಲಿ ಗಾಬರಿಯ ದನಿಯಲ್ಲಿ ಸೂಚನೆ ನೀಡುವುದು, ಪ್ರತಿಭಟಿಸುವುದು, ಅಪಾಯ ನೀಗಿದ ಮೇಲೆ ಹರ್ಷದ ದನಿ ಹೊರಡಿಸುವುದು, ನೀರಿನಲ್ಲಿ ಮುಳುಗು ಹಾಕಿ ಬಿಸಿಲಿನ ಝಳದಿಂದ ಸಾಂತ್ವನ ಪಡೆಯುವುದು, ಮುಂತಾದವನ್ನು ಮರೆಯಲ್ಲಿ ನಿಂತು ನೋಡುತ್ತ ಹೋದಂತೆ ಅವುಗಳ ಬಗ್ಗೆ ಆಸಕ್ತಿ ಮತ್ತಷ್ಟು ಹೆಚ್ಚುತ್ತದೆ.

ಪಕ್ಷಿಗಳ ವಲಸೆ ನೂರಾರು ವರ್ಷಗಳಿಂದ ನಡೆಯುತ್ತ ಬಂದಿರುವ ವಿದ್ಯಮಾನ. ಅವು ಭೂಖಂಡದ ಬೇರೆ ಬೇರೆ ಭಾಗಗಳಿಂದ, ಭೌಗೋಳಿಕ ಎಲ್ಲೆಗಳನ್ನು ದಾಟಿ, ಹಾರಿ ಬಂದು ಒಂದು ನಿರ್ದಿಷ್ಟ ತಾಣದಲ್ಲಿ ಸಂಸಾರ ಹೂಡುತ್ತವೆ, ಆಹಾರ ಸಂಗ್ರಹಿಸುತ್ತವೆ, ಮೊಟ್ಟೆಯಿಟ್ಟು ಮರಿಮಾಡುತ್ತವೆ. ಮರಿಗಳು ಹಾರಾಡುವಂತಾಗುವ ವೇಳೆಗೆ ಹಾರಿಹೋಗುತ್ತವೆ. ಇವೆಲ್ಲಾ ಪಕ್ಷಿವೀಕ್ಷಕರ ಅಧ್ಯಯನಕ್ಕೆ ಬಹಳ ಮುಖ್ಯವಾದ ವಿಷಯಗಳಾಗಿವೆ.



■ ಅನಿಲ್ ರಮೇಶ್

# ಬೊಂಬೆ



ಬೊಂಬೆ–ಮನುಷ್ಯನ ಮಾನಸಿಕ ತುಮುಲದ ಕೈಗನ್ನಡಿ. ಅಥವಾ ಮನಸ್ಸಿನ ಭಾವನೆಯ ಪ್ರತಿರೂಪ. ಯಾವುದೇ ವ್ಯಕ್ತಿಯ ಮನಸ್ಸಿನ ಅಭಿವ್ಯಕ್ತ ಬೊಂಬೆ ರೂಪದಲ್ಲಿ ರೂಪಿಸಿಕೊಂಡಿರುತ್ತದೆ. ಬೊಂಬೆ, ಮಾತನಾಡದಿದ್ದರೂ ಕಥೆಯನ್ನು ಹೇಳುತ್ತದೆ. ಪ್ರಾಚೀನ ಕಾಲದಿಂದಲೂ ಮನುಷ್ಯನ ಜೀವನ ಚಿತ್ರಣ ಆಯಾ ಕಾಲಕ್ಕೆ ಸೃಷ್ಟಿಸಿದ ಬೊಂಬೆ, ಶಿಲ್ಪಗಳಿಂದ ಕಂಡುಬರುತ್ತದೆ.

ಬೊಂಬೆ, ಕಲ್ಲು, ಮಣ್ಣು, ಸಗಣಿ, ಮರ, ಹತ್ತಿ, ರಬ್ಬರ್, ಕಬ್ಬಿಣ ಮುಂತಾದ ಯಾವುದೇ ವಸ್ತುವಿನಿಂದ ರೂಪಗೊಂಡಿದ್ದರೂ, ಕಲಾವಿದನ ಕೈಚಳಕ–ಬಣ್ಣ, ರೂಪುರೇಖೆಗಳಿಂದ ಸ್ಪಷ್ಟವಾಗಿ ಹೇಳ ಬೇಕಾಗಿರುವುದನ್ನು ಕಥಾರೂಪದಲ್ಲಿ ತಿಳಿಸಿರುತ್ತದೆ. ಮಕ್ಕಳ ಮನಸ್ಸಿನಲ್ಲಿ ಈ ಬೊಂಬೆಗಳು ಜೀವಂತ ರೂಪದಲ್ಲಿ ಮಾತನಾಡುವಂತೆ ಭಾಸವಾಗುತ್ತದೆ. ನವರಾತ್ರಿ, ಬೊಂಬೆ ಹಬ್ಬವನ್ನಾಗಿಸಿದೆ. ಮನೆ–ಮನೆಗಳಲ್ಲಿಡುವ ಬೊಂಬೆಗಳು ಕಥಾರೂಪಕವಾಗಿ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸಗಳಿಂದ ನೀತಿಪಾಠ, ಪೌರಾಣಿಕ ಪಾತ್ರಗಳ ಮೂಲಕ ಪರಿಚಯವಾಗುತ್ತದೆ.

ಹತ್ತಿ–ಬಟ್ಟೆಯಿಂದ ಮಾಡುವ ಚಿತ್ತಾರದ ಬೊಂಬೆಗಳು ರಾಮಾಯಣ–ಮಹಾಭಾರತ ದಂತಹ ಪೌರಾಣಿಕ ಗ್ರಂಥಗಳ ಪಾತ್ರಗಳನ್ನು ತೆರೆದ ಪುಸ್ತಕದಂತೆ ತೋರಿಸುತ್ತದೆ. ಯುವಕ–ಯುವತಿ ಯರಲ್ಲಿ ಹಾಗೂ ಮಕ್ಕಳಲ್ಲಿ ಈ ರೀತಿ ಬೊಂಬೆ ಮಾಡುವ ಹವ್ಯಾಸ ಬೆಳೆದರೆ, ಮನಸ್ಸಿಗೆ ಮುದ ಕೊಡುವುದರ ಜೊತೆಗೆ, ಸೋಮಾರಿಯಾಗಿರದೆ ದುಶ್ಚಟಗಳಿಂದ ದೂರವಿದ್ದು ಕ್ರಿಯಾಶೀಲರಾಗಿರುತ್ತಾರೆ. ಬೃಹಚ್ಚರಣ ಸಮುದಾಯದಲ್ಲೂ ಬೊಂಬೆ ತಯಾರಿಕಾ ಕಲಾವಿದರಿಗೆ ಕೊರತೆ ಇಲ್ಲ. ಎಲೆ ಮರೆಯ ಕಾಯಿಯಂತಿದ್ದಾರೆ.



■ ಮಮತಾ ಶಿವಕುಮಾರ್

# ಕ್ಷೇತ್ರ ಪರಿಚಯ – 10



## ತುಳಸಿ ಮಠ

ಇಂದಿನ ಯಾಂತ್ರಿಕ ಜಂಜಾಟದ ಬದುಕಿಗೆ ನಮ್ಮನ್ನು ನಾವೇ ಸಮರ್ಪಿಸಿ ಒಗ್ಗಿಕೊಂಡರೂ, ದೇಹ ಹಾಗೂ ಮನಸ್ಸಿಗೆ ಶಾಂತಿ–ಸಮಾಧಾನ ಸಿಗುತ್ತಿಲ್ಲ. ಹಣದಿಂದ ಸುಖ ತಾತ್ಕಾಲಿಕ. ಬಿಡುವಿನ ವೇಳೆಯಲ್ಲಿ ಓದು, ಆಧ್ಯಾತ್ಮಿಕ ಚಿಂತನೆ–ಜಪ, ಸ್ವಲ್ಪ ಮನಸ್ಸಿಗೆ ಹಿತ–ಚೈತನ್ಯ ಕೊಡುತ್ತದೆ. ಹನುಮ, ಅಹಲ್ಯಾ, ಶಬರಿ ಶ್ರೀರಾಮನ ಜಪದಲ್ಲೇ ಧನ್ಯರಾದ ನಿದರ್ಶನ ನಮ್ಮಲ್ಲಿದೆ. ನೆಮ್ಮದಿಯಿಂದ ಜಪ ಮಾಡಲೂ ಸಹಾ ಇಂದು ಪ್ರಶಾಂತ ವಾತಾವರಣ ಹುಡುಕಬೇಕಿದೆ. ಇಂತಹ ವಾತಾವರಣವಿರುವ ಸ್ಥಳವು ಬೆಂಗಳೂರಿನ ಸಮೀಪದಲ್ಲೇ ಇರುವುದು ಸಂತಸದ ವಿಷಯ.

2008ರ ವಿಜಯದಶಮಿಯಂದು ಪೇಜಾವರ ಶ್ರೀ ಶ್ರೀ ವಿಶ್ವೇಶ್ವತೀರ್ಥರಿಂದ ಕನಕಪುರ ರಸ್ತೆ, ಅಗರಹೊಸಪಾಳ್ಯದಲ್ಲಿ ಆಂಜನೇಯಸ್ವಾಮಿ ಹಾಗೂ ಗುರುರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಭೂಮಿಪೂಜೆ ನೆರವೇರಿತು. 2010ರಲ್ಲಿ ಮಂತ್ರಾಲಯ ಶ್ರೀ ಶ್ರೀ ಸುಯತೀಂದ್ರತೀರ್ಥರಿಂದ ಗುರು ಸಾರ್ವಭೌಮರ ಬೃಂದಾವನ ಸ್ಥಾಪಿಸಲಾಯಿತು. ದಿನಂಪ್ರತಿ ನಿಷ್ಠೆಯಿಂದ ರಾಯರಿಗೆ ಪೂಜಾವಿಧಿಗಳು ನಡೆಯುತ್ತಿದೆ.

ಇಂದು ಈ ಪ್ರಶಾಂತ ವಾತಾವರಣದಲ್ಲಿ ಯಾರು ಬೇಕಾದರೂ ಮನಶ್ಶಾಂತಿಗಾಗಿ ಜಪ ಮಾಡಬಹುದಾದ ವಾತಾವರಣವಿದೆ. ಬೃಂದಾವನದ ಸುತ್ತ ಸಾವಿರಾರು ತುಳಸಿ ಗಿಡಗಳಿರುವುದರಿಂದ 'ತುಳಸಿಮಠ' ಎಂದು ಕರೆಯುತ್ತಾರೆ. ತುಳಸಿ ಮಹತ್ವ ಅರುಹಲು "ಗುರುಕೃಪಾ ಸೇವಾ ಟ್ರಸ್ಟ್" ಪ್ರಚಾರವಾಗಿ ಲಕ್ಷಕ್ಕೂ ಹೆಚ್ಚು ತುಳಸಿ ಗಿಡಗಳನ್ನು ಉಚಿತವಾಗಿ ವಿತರಿಸುತ್ತಿದ್ದಾರೆ. ನೀವೂ ಒಮ್ಮೆ ನೋಡಿ ಬನ್ನಿ.

ಫೋನ್: **080–28427031**



■ **ಸರ್ಜಾಪುರ ಶ್ರೀನಿವಾಸ್**

# 'ಗಮಕ' ಒಂದು ಕಲೆ

ಕಾವ್ಯವನ್ನು ಸಾಹಿತ್ಯ, ಭಾವ, ರಸ ಈ ಮೂರರೊಂದಿಗೆ ಬೆರೆಸಿ, ಸಂಗೀತ, ರಾಗ ರೂಪದಲ್ಲಿ ಹಾಡುವ ಕಲೆಗೆ 'ಗಮಕ' ಎಂದು ಹೆಸರು. ಪುರಾಣದಲ್ಲಿ, ದೇವಲೋಕದ ಗಮಕಿಗಳನ್ನು 'ವಿದ್ಯಾಧರರು' ಎಂದು ಕರೆಯುತ್ತಾರೆಂಬ ಉಕ್ತಿ ಇದೆ. ಶ್ರೀ ರಾಮಚಂದ್ರನ ಮಕ್ಕಳಾದ ಲವ–ಕುಶರು ಈ ಕಲೆಯಲ್ಲಿ ಪರಿಣಿತರಾಗಿದ್ದು, ವಾಲ್ಮೀಕಿ ರಾಮಾಯಣವನ್ನು ರಾಮನ ಮುಂದೆಯೇ ಗಮಕ ರೂಪದಲ್ಲಿ ವಾಚನ ಗೈದರೆಂದು ಪುರಾಣದಲ್ಲಿ ಹೇಳಿದೆ.

ಶ್ರೀ ಮುಮ್ಮಡಿ ಚಾಮರಾಜ ಒಡೆಯರ್‌ರವರು ಸ್ವತಃ ಉತ್ತಮ ಗಮಕಿಗಳಾಗಿದ್ದರೆಂದೂ, ಅವರ ಸಮಕಾಲೀನರೂ, ವಿದ್ವಾಂಸರೂ ಆದ ಬಸವಪ್ಪಶಾಸ್ತ್ರಿಗಳು ಕಾವ್ಯವಾಚನ ಮಾಡುತ್ತಿದ್ದ ಸಮಯದಲ್ಲಿ ಹಸುಗಳು ಮೇವು ಮರೆತು ವಾಚನವನ್ನು ಆಲಿಸಿ, ಆಸ್ವಾದಿಸುತ್ತಿದ್ದವೆಂದು ಇತಿಹಾಸ ಹೇಳುತ್ತದೆ.

ಈ ಕಾಲದಲ್ಲಿ, ಈ ಕಲೆಯು ಮನ್ನಣೆ ಇಲ್ಲದೆ ನಶಿಸಿ ಹೋಗುತ್ತಿದೆ. ಈ ಕಲೆಗೆ ಬೇಕಾದ ಸಂಗೀತ ಮತ್ತು ಸಾಹಿತ್ಯ ಜ್ಞಾನದ ಸಮ್ಮಿಳಿತ ಕಾಣುತ್ತಿಲ್ಲ. ಈ ಕಲೆಯ ಪುನರುದ್ಧಾರಕ್ಕಾಗಿ, ಸಾಹಿತ್ಯಾಭಿರುಚಿಕರು ಶ್ರಮಿಸಿದರೆ, ಇದನ್ನು ಹೆಚ್ಚಾಗಿ ಉಳಿಸಿ, ಬೆಳೆಸಬಹುದು.

ಬೃಹಚ್ಚರಣ ಬಂಧುಗಳಲ್ಲೂ ಶ್ರೀ ರಾಮಾಯಣದ ರಾಮಚಂದ್ರಪ್ಪ, ಶ್ರೀಮತಿ ಜಿ.ಎಸ್.ಲಕ್ಷ್ಮೀದೇವಿ, ರಾಚಮಾರನಹಳ್ಳಿ ಶಂಕರನಾರಾಯಣ, ಶ್ರೀ ಶ್ರೀನಿವಾಸಮೂರ್ತಿ ಪ್ರಸಿದ್ಧಿ ಪಡೆದವರು ಅಲ್ಲದೆ ರಾಜಾಪುರದ ಶ್ರೀ ಭಗವಾನ್, ಶ್ರೀಮತಿ ಪ್ರಕೃತಿದೇವಿ ಗಮಕಿಗಳು. ಶ್ರೀಮತಿ ಶುಭಾ ಗೋವಿಂದರಾವ್, ಸರ್ಕಾರದ ವಿದ್ಯಾರ್ಥಿವೇತನ ಪಡೆದು ಅಭ್ಯಸಿಸಿ, ಸಾರ್ವಜನಿಕ ಸಮಾರಂಭ ಹಾಗೂ ದೂರದರ್ಶನದಲ್ಲಿ ಕಾರ್ಯಕ್ರಮ ನೀಡುತ್ತಿದ್ದಾರೆ. ನಮ್ಮವರಲ್ಲಿ ಅನೇಕ ಗಮಕಿಗಳಿದ್ದರೂ ಎಲೆಮರೆಯ ಕಾಯಿಯಂತಿದ್ದಾರೆ. ಗಮಕ ಕಲೆ ಮನಸ್ಸಿಗೆ–ದೇಹಕ್ಕೆ ಮುದಕೊಡುವ ಸುಸಂಸ್ಕೃತ ವಿದ್ಯೆ.



■ **ಗಮಕಿ ಆರ್.ವಿ. ಗೋಪಿನಾಥ್**
ಆಕಾಶವಾಣಿ ಕಲಾವಿದ

## ಮದುವೆ ಬೆಳ್ಳಿಹಬ್ಬ

ನಮ್ಮ ಸಂಘದ ಸದಸ್ಯರಾದ **ಶ್ರೀಮತಿ ಮತ್ತು ಶ್ರೀ ಗುರುಪ್ರಸಾದ್** ಅವರು, ತಮ್ಮ ಮದುವೆಯ 24ನೇ ವಾರ್ಷಿಕೋತ್ಸವದ ಸವಿನೆನಪಿಗಾಗಿ ಸಂಘದ ಶಾಶ್ವತ ಅನ್ನಸಂತರ್ಪಣಾ ನಿಧಿಗೆ **10,000/–ರೂ.**ಗಳನ್ನು ದೇಣಿಗೆ ನೀಡಿದ್ದಾರೆ. 'ಬೃಹಚ್ಚರಣ' ಸಂಘವು ಅವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.

## ನೆನಪಿನಾಳದಿಂದ ಛಾಯಾಚಿತ್ರ - 9 ಮತ್ತು 10



ಅಟ್ಟೂರು ಎ. ಗೋಪಾಲರಾವ್ ಅವರ ಅವಿಭಕ್ತ ಕುಟುಂಬ – 1955



ಶ್ರೀಮತಿ ಗುಂಜೂರು ಗೋಪಾಲಯ್ಯ ಅವರ ಅವಿಭಕ್ತ ಕುಟುಂಬ – 1964



ಶ್ರೀಮತಿ ವರಲಕ್ಷ್ಮೀ ಹಾಗೂ ಕಾಚರಕನಹಳ್ಳಿ ಶ್ರೀ ಕೆ.ಎಸ್. ಛಾಯಾಪತಿ (ಸಂಗೀತ) ಮದುವೆ ಸಮಾರಂಭ – 1937



ಡಾ|| ದಾನಪ್ಪನವರ ಸಹೋದರಿಯ ವಿವಾಹ ಮಹೋತ್ಸವ – 1938

# ಗೌತಮ ಗಿರಿಕ್ಷೇತ್ರ ಪರಿಚಯ-11





ಇತಿಹಾಸ ಪ್ರಸಿದ್ಧವಾದ 'ಆವತಿ' ಗ್ರಾಮವು ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ (ಬೆಂಗಳೂರಿನಿಂದ 48 ಕಿ.ಮೀ.) ಹಿಂದೆ ಗೌತಮ ಮುನಿಗಳು ಇಲ್ಲಿ ವಾಸವಾಗಿದ್ದುದರಿಂದ ಇದಕ್ಕೆ 'ಗೌತಮ ಗಿರಿಕ್ಷೇತ್ರ' ಎಂದು ಅವರಿಂದಲೇ ತಿಮ್ಮರಾಯಪ್ಪ ಸ್ವಾಮಿಯನ್ನು ಪ್ರತಿಷ್ಠಾಪಿಸಿರುವುದರಿಂದ "ಶ್ರೀ ತಿಮ್ಮರಾಯಸ್ವಾಮಿ ಬೆಟ್ಟ" ಎಂದೂ ಕರೆಯುವ ವಾಡಿಕೆಯಿದೆ.

ಆವತಿ ಗ್ರಾಮದಿಂದ 3 ಕಿ.ಮೀ. ದೂರದಲ್ಲಿರುವ ಪ್ರಕೃತಿದತ್ತವಾದ ಹಾಸು ಬಂಡೆಯ ಮೇಲೆ ಶ್ರೀ ತಿಮ್ಮಪ್ಪಸ್ವಾಮಿಯು (ವೆಂಕಟರಮಣ) ಪೂರ್ವಾಭಿಮುಖವಾಗಿದ್ದು, ಸಕಲ ಶಿಲ್ಪಶಾಸ್ತ್ರಗಳಿಗನುಸಾರವಾಗಿ ನಿರ್ಮಾಣವಾದ ದೇವಸ್ಥಾನವಾಗಿದೆ. ಸ್ವಾಮಿಯು ಸುಮಾರು ಆರು ಅಡಿ ಎತ್ತರವಿದ್ದು, ಸಾಲಿಗ್ರಾಮ ಶಿಲೆಯ ಈ ಮೂರ್ತಿಯು, ಪ್ರಸನ್ನ ವದನನಾಗಿ ಮೆರೆಯುತ್ತಿದ್ದಾನೆ. ದೇವಾಲಯದ ಸುತ್ತ ರಾಮಾಯಣದ ದೃಶ್ಯಗಳನ್ನು ಸುಂದರವಾಗಿ ಕೆತ್ತಲಾಗಿದೆ.

ಬೆಟ್ಟದ ಮೇಲಿರುವ ಮೂರು ಪುಷ್ಕರಣಿಗಳಲ್ಲಿ ಅನುಗಾಲವೂ ನೀರಿದ್ದು, ಮಳೆಗಾಲದಲ್ಲಿ ಹೊರ ಚೆಲ್ಲುವುದೂ ಉಂಟೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿರುವ ಗುಹೆಯೊಂದರಲ್ಲಿ ಗೌತಮ ಮುನಿಗಳು ವಾಸವಾಗಿದ್ದು ದಿನಂಪ್ರತಿ ಹೋಮ-ಹವನ, ನಿತ್ಯ ಪೂಜೆಯಿಂದ ತಿಮ್ಮರಾಯಸ್ವಾಮಿಯನ್ನು ಆರಾಧಿಸುತ್ತಿದ್ದರೆಂದು ತಿಳಿದುಬಂದಿದೆ.

ಈ ಕ್ಷೇತ್ರದ ಬಗ್ಗೆ ಮತ್ತೊಂದು ಕಥೆ ಇದೆ. ಮಾಗಡಿ ಕೆಂಪೇಗೌಡನ ಪೂರ್ವಿಕರಾದ ರಣಬೈರೇಗೌಡನು, ಕಾಂಚೀಪುರದಿಂದ ಕಾರಣಾಂತರಗಳಿಂದ ಇಲ್ಲಿ ಬಂದು, ದುರ್ಗಮವಾದ ಕಾಡಿನಿಂದಲೂ, ಬೆಟ್ಟಗುಡ್ಡಗಳಿಂದಲೂ ಕೂಡಿದ ಈ ಪ್ರದೇಶವು ತನ್ನ ಪ್ರಭುತ್ವವನ್ನು ಸ್ಥಾಪಿಸಲು ಸೂಕ್ತವೆಂದೆನಿಸಿ, ಇಲ್ಲಿಯೇ ನೆಲೆಸಲು ನಿರ್ಧರಿಸುತ್ತಾನೆ. ಸ್ವಪ್ನ ದರ್ಶನದಂತೆ ಭೂಮಿಯಲ್ಲಿ ಸಿಕ್ಕ ಶ್ರೀ ಚೆನ್ನಕೇಶವ ವಿಗ್ರಹವನ್ನು ಅಲ್ಲಿಯೇ ಸಿಕ್ಕ ಬಂಗಾರದ ಕೊಪ್ಪರಿಗೆಯ ಸಹಾಯದಿಂದ, ಪ್ರತಿಷ್ಠಾಪಿಸಿ ಪಂಚರಾತ್ರೋಗಮ ಪ್ರಕಾರ ಪೂಜಾಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಾನೆ. ಈಗಲೂ ಅದೇ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.

ಬೆಟ್ಟದ ಮೇಲೆ ಶಂಕುತೀರ್ಥ ಚಕ್ರತೀರ್ಥ, ಲಕ್ಷ್ಮೀತೀರ್ಥ, ಗೌತಮಾಶ್ರಮ, ಅಹಲ್ಯಾಶಿಲೆ, ದೀವಿಗೆಕಂಬ, ಇವೇ ಮುಂತಾದ ಅದ್ಭುತಗಳನ್ನು ಹೊಂದಿರುವ ಈ ಕ್ಷೇತ್ರವನ್ನು ಮತ್ತೊಮ್ಮೆ ನೋಡಬೇಕೆನಿಸುತ್ತದೆ.

ನಿತ್ಯ ಪೂಜೆಯು ಪ್ರಾತಃಕಾಲದಿಂದಲೇ ಪ್ರಾರಂಭವಾಗಿ, ಸಾವಿರಾರು ಭಕ್ತರು ತಮ್ಮ ಕುಟುಂಬದ ಮದುವೆ, ಮುಂಜಿ, ನಾಮಕರಣ ಮುಂತಾದ ಶುಭಕಾರ್ಯಕ್ರಮಗಳನ್ನು ಸ್ವಾಮಿಯ ಸನ್ನಿಧಿಯಲ್ಲಿ ನೆರವೇರಿಸಲು ಅವಕಾಶವಿದೆ. ಮಧ್ಯಾಹ್ನ ಉಚಿತ ಭೋಜನ ಪ್ರಸಾದವನ್ನು ದೇವಸ್ಥಾನದ ಆಡಳಿತ ಮಂಡಳಿಯು ಹಮ್ಮಿಕೊಂಡಿದೆ.

ಇಂತಹ ಪುಣ್ಯಕ್ಷೇತ್ರದಲ್ಲಿ 'ಬೃಹಚ್ಚರಣ' ಸಂಘವು ತನ್ನ ಕಾರ್ಯಕಾರಿ ಸಮಿತಿಯ ಸಭೆಯನ್ನು 26-1-2014ರಂದು ನಡೆಸಿತು. ಅಂದಿನ ಸಭಾ, ಸ್ವಾಮಿಯ ಅಭಿಷೇಕ, ಪ್ರಸಾದದ ವೆಚ್ಚವನ್ನು ಸಂಘದ ಅಧ್ಯಕ್ಷ ಶ್ರೀ ಸೋಮಸುಂದರ ಕುಟುಂಬದವರು ಭರಿಸಿದ್ದರು. ಭಾಗವಹಿಸಿದವರಿಗೆಲ್ಲಾ ಕ್ಷೇತ್ರ ವೀಕ್ಷಣೆಯಿಂದ ತನು-ಮನ ಸಾರ್ಥಕತೆಯ ಭಾವವು ತುಂಬಿ ಬಂದ ಅನುಭವವಾಯಿತು.

■ ಸರಸ್ವತಿ



## ನೇಮಕ



ಬೆಂಗಳೂರು, ಬಸವೇಶ್ವನಗರ ಬ್ರಾಹ್ಮಣ ಸಭಾ, ಕಾರ್ಯಕಾರಿ ಸಮಿತಿ ಅಧ್ಯಕ್ಷರಾಗಿ, ಬೃಹಚ್ಚರಣ ಸಂಘದ ಸದಸ್ಯರಾದ **ಶ್ರೀ ಆರ್.ಎನ್. ವೆಂಕಟಸುಬ್ಬರಾವ್** (ನಟರಾಜ್)ರವರು ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಸಂಘವು ಶ್ರೀಯುತರಿಗೆ ಶುಭ ಹಾರೈಸುತ್ತದೆ.

## ಶ್ರೀ ಶನೈಶ್ಚರಸ್ವಾಮಿಗೆ ಉಡುಪು ಉಡುಗೊರೆ

ಬೆಂಗಳೂರು ಗವೀಪುರ ಗುಟ್ಟಹಳ್ಳಿ ಶ್ರೀ ಶನೈಶ್ಚರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಪ್ರಯುಕ್ತ ನಡೆದ ರಥೋತ್ಸವಕ್ಕೆ ನಮ್ಮ ಸಂಘದ ಶ್ರೀಯುತರಾದ ಎಸ್.ಸಿ. ಶ್ರೀನಿವಾಸ್, ಎಸ್.ಸಿ ರಾಘವಪ್ರಸಾದ್, ಎಸ್. ಸೋಮಸುಂದರ, ವಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗಣೇಶ್ ಶ್ರೀಧರ್, ಎಸ್. ಪ್ರದೀಪ್, ವಿ. ಅರುಣ, ಸತ್ಯನಾರಾಯಣ ಎಸ್., ಸರಸ್ವತಿ ನಟರಾಜ್, ಈಶ್ವರನ್‌ರವರು ಉತ್ಸವದ ಉಡುಪನ್ನು ಹೊಲಿಸಿ ಕೊಟ್ಟಿದ್ದಕ್ಕೆ, ದೇವಸ್ಥಾನದ ಕಾರ್ಯದರ್ಶಿಗಳು ಶುಭ ಕೋರಿರುತ್ತಾರೆ.

## ಸನ್ಮಾನ ಸಮಾರಂಭ




'ಬೃಹಚ್ಚರಣ' ಸಂಘದ ಸದಸ್ಯರಾದ ಮನೋತಜ್ಞ ಡಾ॥ ಜಿ.ಸ್ವಾಮಿನಾಥನ್‌ರವರಿಗೆ 'ಕಡಬಾಂಸ್' (CADABAM'S) 2013ರ ಪ್ರತಿಷ್ಠಿತ ಮನೋತಜ್ಞ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯಪಾಲರಾದ ಗೌರವಾನ್ವಿತ ಭಾರದ್ವಾಜ್ ಹಾಗೂ ತಮಿಳುನಾಡು ರಾಜ್ಯಪಾಲರಾದ ಗೌರವಾನ್ವಿತ ರೋಸಯ್ಯ ಅವರಿಂದ ಪಡೆದಿದ್ದಾರೆ. ಈ ಪ್ರತಿಷ್ಠಿತ ಪ್ರಶಸ್ತಿಯೊಂದಿಗೆ ನೀಡಿದ ₹ 54,000/– ಗಳನ್ನು, ಮಾನಸಿಕ ಅಸ್ವಸ್ಥ ವಸತಿಹೀನರಿಗಾಗಿ ಇರುವ 'ಚಿತ್ತ ಪ್ರಕಾಶ ಚಾರಿಟಬಲ್ ಟ್ರಸ್ಟ್'ನವರಿಗೆ ನೀಡಿ, ತಮ್ಮ ಸಹೃದಯತೆಯನ್ನು ತೋರಿಸಿದ್ದಾರೆ. ಇಂತಹ ಮಹನೀಯರನ್ನು ಸಂಘವು ಸದಸ್ಯರನ್ನಾಗಿ ಪಡೆದಿರುವುದು ಹೆಮ್ಮೆಯ ವಿಷಯ.




'ಬೃಹಚ್ಚರಣ' ಸಂಘದ ಸದಸ್ಯರು ಹಾಗೂ ವಾದ್ಯ ವಾಹಿನಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ಸಿ. ಜಯರಾಂರವರನ್ನು ರಾಷ್ಟ್ರೀಯ ಸೊಂಟಕೆ ಗ್ಲೋಬಲ್ ಸಂಗೀತ ಅಕಾಡೆಮಿಯಲ್ಲಿ ವಾದ್ಯಸಂಗೀತ ಕಾರ್ಯಕ್ರಮ ನೀಡಿದ್ದಕ್ಕಾಗಿ, ಅಕಾಡೆಮಿಯ ವತಿಯಿಂದ ಸನ್ಮಾನಿಸಲಾಯಿತು.



'ಬೃಹಚ್ಚರಣ' ಸಂಘದ ಸದಸ್ಯ ಶ್ರೀ ಮಂಜುನಾಥ್, 25 ವರ್ಷಗಳ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ, 29ನೇ ರಾಷ್ಟ್ರೀಯ ದಲಿತ ಸಾಹಿತ್ಯ ಅಕಾಡೆಮಿಯು "ಭಗವಾನ್ ಬುದ್ಧ ನ್ಯಾಷನಲ್ ಫೆಲೋಶಿಪ್ ಅವಾರ್ಡ್–2013"ನ್ನು ನೀಡಿ ಗೌರವಿಸಿತು.

## ಶಾರದಾ ಸ್ತುತಿ

ಶೃಂಗೇರಿಯಲಿ ನೆಲೆ ನಿಂತ ಮಹಾಮಾಯೆ
ಗತಿ ನೀನೆಮಗೆ ವಿದ್ಯಾದೇವಿಯೆ
ಗೀತ ಗಾಯನ ಸಾಹಿತ್ಯ ಪ್ರಿಯೆ
ರೀತಿ ರೀತಿಯಲಿ ಪೂಜೆ ನಡೆವ ಮಾತೆಯೆ
ನೀನಲ್ಲದೆ ಮತ್ತಾರು ನಮಗೆ
ವಾಗ್ದೇವಿ ವಿದ್ಯಾದಿಗಳ ನೀಡೆಮಗೆ
ಸಿರಿ ಸಂಪದ ಬೇಡ ನಿನ್ನ ಕೃಪೆ ಸಾಕೆಮಗೆ
ನೀನಿರುವಾಗ ಭಯವುಂಟೆ ಮನುಜರಿಗೆ
ಶ್ರೀ ಶಂಕರರು ಸ್ಥಾಪಿಸಿದರು ನಿನ್ನಾ ಶುಭ ಘಳಿಗೆ
ಶಾರದಾಂಬೆ ನಮಿಪೆವು ನಿನ್ನಾ ಚರಣಕೆ
ರಮಣೀಯ ತಾಯೇ ನೆಮ್ಮದಿ ನೀಡು ಮನಕೆ
ದಾರಿ ತೋರಿ ನಡೆಸಮ್ಮ ಸನ್ಮಾರ್ಗಕೆ
ದೇವಿ ನಿನ್ನ ಕರುಣೆ ಇರಲಿ ಮಾನವ ಕುಲಕೆ
ವಿದ್ಯಾದಾಯಿನಿ ನುಡಿಯಿಂದ
ನಾ ವಂದಿಪೆ ನಿನ್ನ ಪದತಲಕೆ.



■ ರಮ್ಯ ಪರಮೇಶ್ವರ್

## ದೀಪದ ಬೆಳಕು

ದೀಪಾರಾಧನೆ ದಿನದಂದು ಹೊತ್ತಿದ
ಹಣತೆಗಳ ಸಾಲುಸಾಲಿನ ಬೆಳಕಿನಲಿ
ಅದೆಷ್ಟು ಸರಳರೇಖೆಯ ಕಿರಣವದು,
ನೇರವಹುದು, ಸಮಾನಾಯಕ ಚಲನೆಯು
ಕತ್ತಲಿನ ಅಂಧಕಾರವ ನೀಡಿದ ದೀಪಕೆ
ರವಿಕಿರಣಗಳಿಗೆ ಪ್ರೈಪೋಟಿ ನೀಡುವ ತವಕ
ಕಾರ್ತಿಕಾ ರಾತ್ರಿಯಲಿ ಪ್ರಖರತೆಯಿಂ
ಆವಿರ್ಭವಿಸುವ ವಕ್ರೀಭವನ ಕೋನದಲಿ
ಪಟ್ಟಕದ ತೆರೆಯ ನೋಡಿ ಲಾಲಿತ್ಯದಿಂ
ಮೂಡಿಬರುವ ವರ್ಣವಿಭಜನೆ ರಂಗುಗಳು
ಕಾರ್ತಿಕದ ಕೋಟಿ ಕೋಟಿ ದೀಪಗಳ ಪ್ರಭೆಯು
ಸಂಕಲಿತವಾದರೂ ಸೂರ್ಯನ ಬೆಳಕಿಗೆ ಅಸಮ
ಆದರೂ ಹಣತೆಯ ಕ್ರೋಢೀಕೃತ ಬೆಳಕು
ರಜನಿಯಲಿ ಜನರಿಗೆ ಮುದವ ನೀಡುವುದು
ಸತ್ಯದ ಆಹ್ಲಾದಕರ ಅನುಭವದ ಭಾವ.



■ ಜಿ.ಎಸ್. ಸತ್ಯಮೂರ್ತಿ

# ಸಂಸ್ಕಾರ ಚಿಂತಾಮಣಿ

ಸನಾತನ ಹಿಂದೂ ಧರ್ಮದಲ್ಲಿ, ನಮ್ಮ ಹಿಂದಿನ ಋಷಿ ಮುನಿಗಳು ಮಾನವ ಜೀವನಕ್ಕೆ ಉಜ್ವಲವಾದ ಸಂಸ್ಕಾರ, ಸಂಸ್ಕೃತಿಗಳನ್ನು ಕೊಟ್ಟು ಹೋಗಿದ್ದಾರೆ.

ಜೀವನದಲ್ಲಿ ಪರಿಪೂರ್ಣತೆ ಸಾಧಿಸಬೇಕಾದರೆ ನಮ್ಮನ್ನು ನಾವೇ ಸಂಸ್ಕರಿಸಿಕೊಳ್ಳುತ್ತಾ ಸಾಗಬೇಕು. ಅಂದರೆ ಜೀವನದ, ಏರಿಳಿತ, ಸುಖ, ದುಃಖ, ರಾಗ–ದ್ವೇಷಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವನೆ ಬೆಳೆಯಬೇಕು. ಇದನ್ನೇ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆ ಯಲ್ಲಿ ಹೇಳಿರುವುದು.

ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ನಾವು ಸಂಸ್ಕಾರ, ಸನ್ನಡತೆ, ಸಂಸ್ಕೃತಿ ಬಗ್ಗೆ ತಿಳಿಸಿಕೊಟ್ಟು ಸತ್ಸಂಪ್ರದಾಯಗಳನ್ನು ಕಲಿಸಿ, ಅಭ್ಯಾಸ ಮಾಡಿಸಿದಾಗಲೇ ಅವರು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಲು ಸಾಧ್ಯ ವಾಗುತ್ತದೆ. ಬಾಲ್ಯದಲ್ಲಿ ಕಲಿಯಲಾಗದಿದ್ದರೆ ಮುಂದೆ ಜೀವನದಲ್ಲಿ ರೂಢಿಸಿಕೊಳ್ಳಲು ಅತ್ಯಂತ ಕಷ್ಟಕರವಾಗುತ್ತದೆ.

ಇಂದಿನ ಆಧುನಿಕ ಜೀವನದಲ್ಲಿ ತಾಯ್ತಂದೆಯರಿಗೆ, ಮಕ್ಕಳಿಗೆ ಇದೆಲ್ಲಾ ಕಲಿಸಿ ಕೊಡುವಷ್ಟು ಸಮಯ, ತಾಳ್ಮೆ ಎರಡೂ ಇರುವುದಿಲ್ಲ. ಏಕೆಂದರೆ ಉದ್ಯೋಗಸ್ಥರಾಗಿರುತ್ತಾರೆ. ಮೊದಲೆಲ್ಲ ಅವಿಭಕ್ತ ಕುಟುಂಬ ದಲ್ಲಿದ್ದಾಗ ಮನೆಯ ಹಿರಿಯರು ಮಕ್ಕಳಿಗೆ ಇದೆಲ್ಲ ಕಲಿಸಿ ಕೊಡುತ್ತಿದ್ದರು. ಈಗಿನ ಮಕ್ಕಳಿಗೆ ಆ ಸುಯೋಗವಿಲ್ಲ. ಮನೆಯಲ್ಲಿ ಅಜ್ಜಿ, ತಾತ ಇದ್ದರೆ ಈ ಕೆಲಸ ಮಾಡಬಹುದೇನೋ!

ಮಕ್ಕಳಿಗೆ ದಿನಚರಿಯಲ್ಲಿ ಬೆಳಗ್ಗೆ ಏಳುವಾಗಲೇ ಶ್ಲೋಕದಿಂದ ಆರಂಭವಾಗಬೇಕು. ಕರಾಗ್ರೇ ವಸತೇ ಲಕ್ಷ್ಮೀ, ಸಮುದ್ರ ವಸನೇದೇವಿ, ಎಂದು ಭೂಮಿತಾಯಿಗೆ ವಂದಿಸಿ, ದಿನನಿತ್ಯದ ಪೂಜೆ, ಹಬ್ಬಗಳ ಆಚರಣೆಗೆ ಅದರ ಮಹತ್ವ, ಅತಿಥಿ ಸತ್ಕಾರ, ಮೆಲ್ಲಗೆ, ಮಧುರವಾಗಿ, ಹಿತವಾಗಿ ಮಾತನಾಡುವುದು ಮತ್ತು ಜೀವನದ ಕೆಲವು ಧರ್ಮಸೂಕ್ಷ್ಮಗಳನ್ನು ತಿಳಿಸಿಕೊಡಬೇಕು.

ಈ ರೀತಿ ಒಳ್ಳೆ ಸಂಸ್ಕಾರವಂತ ಮಕ್ಕಳಿಂದ, ಸಮಾಜಕ್ಕೆ ಸತ್ಪ್ರಜೆಯಾಗಿ, ಜವಾಬ್ದಾರಿಯಾದ ನಾಗರೀಕರಾಗಿ, ಬದುಕು ಚೆನ್ನಾಗಿರುತ್ತದೆ. ಈ ಎಲ್ಲ ಜವಾಬ್ದಾರಿ ತಾಯಿ–ತಂದೆಗಳ ಮೇಲಿದೆ. ನಮ್ಮ ಪೂಜ್ಯ ಅಜ್ಜಿಯವರಾದ 'ನಾರಾಯಣಮ್ಮ'ನವರೂ ಹಾಗೂ ನಮ್ಮ ತಾಯಿ ಶ್ರೀಮತಿ ಶಾರದಾರವರು ಶ್ಲೋಕಗಳ ಕಂಠಪಾಠ, ಗುರುಚರಿತ್ರೆ, ಶ್ಯಾಮಲದಂಡಕ, ಎಲ್ಲಾ ಹೇಳಿಕೊಟ್ಟಿದ್ದರು.

ಹಿರಿಯರೂ ಸಹ ಮಾನಸಿಕ ನೆಮ್ಮದಿಗಾಗಿ ಧ್ಯಾನ, ಯೋಗ, ಜಪ, ತಪ, ಆಧ್ಯಾತ್ಮಿಕದೆಡೆಗೆ ಮನಸ್ಸು, ದೈವಿಕ ಚಿಂತನೆ, ಇದೆಲ್ಲ ಅಗತ್ಯವಾಗಿ ಮಾಡಬೇಕು. ಧರ್ಮ, ಅರ್ಥ, ಕಾಮ, ಮೋಕ್ಷ ಚತುರ್ವಿಧ ಪುರುಷಾರ್ಥ ಗಳು. ಧರ್ಮದ ರೀತಿಯಲ್ಲಿ (ಧಾರ್ಮಿಕವಾಗಿ) ಅರ್ಥ(ಹಣ) ಸಂಪಾದನೆ ಮಾಡಿ ಜೀವನದ ಕಾಮನೆ(ಇಷ್ಟ)ಗಳನ್ನು ಹೊಂದಿ ಮೋಕ್ಷದೆಡೆಗೆ ನಾವು ಸಾಗುವಂತೆ ಮಾಡುವುದೇ ಸತ್ ಸಂಸ್ಕಾರದ ಫಲವು.

ನಮ್ಮ ಬೃಹಚ್ಚರಣ ಬಂಧುಗಳಾದ ಶ್ರೀಮಾನ್ ವಿ.ಎಸ್. ಮಣಿ ಅವರು ನಮಗೆ ಕೊಟ್ಟಿರುವ **"ನಿತ್ಯ ಪ್ರಾರ್ಥನೆ ಶ್ಲೋಕ"**ದ ಉಪಯೋಗವನ್ನು ಸಂಪೂರ್ಣವಾಗಿ ನಮ್ಮ ಮಕ್ಕಳಿಗೆ ತಿಳಿಸಬೇಕು. ಇದೇ ಸಾರ್ಥಕವಾದ ಕರ್ತವ್ಯವಾಗುತ್ತದೆ.



■ ಗಾಯತ್ರಿ ಶೇಷಾಚಲ



# ಸಂಧ್ಯಾವಂದನೆ ಬ್ರಾಹ್ಮಣ

ಸಂಧ್ಯಾವಂದನೆಯು ಬ್ರಾಹ್ಮಣನಾದವನಿಗೆ ಆದ್ಯ ಕರ್ತವ್ಯ. ಸೂರ್ಯೋದಯ, ಮಧ್ಯಾಹ್ನ ಕಾಲ, ಸೂರ್ಯಾಸ್ತಮಾನ ಮೂರು ಸಮಯದಲ್ಲೂ ಮಾಡುವ ಯೋಗ ಹಾಗೂ ಶಕ್ತಿ.

ಸಂಧ್ಯಾವಂದನೆ ಜೀವನವಿಡೀ ನೆಮ್ಮದಿಯಿಂದ ಇರುವಂತೆ ಚಿತ್ತಶುದ್ಧಿ ಮಾಡುತ್ತದೆ. ಸಂಧ್ಯಾವಂದನೆಯ ಕ್ರಮದಲ್ಲಿ ಆಚಮನ್ಯ, ಅರ್ಘ್ಯ, ಜಪ, ಪೂಜೆ ಇರುತ್ತದೆ.

ಸಂಧ್ಯಾವಂದನೆ ಬೆಳಗಿನ ಸಮಯದಲ್ಲಿ ಮಾಡಿದಾಗ ಬ್ರಹ್ಮ ಒಲಿಯುತ್ತಾನೆ, ಮಧ್ಯಾಹ್ನ ಸಮಯದಲ್ಲಿ ಮಾಡಿದಾಗ ವಿಷ್ಣುವು ಒಲಿಯುತ್ತಾನೆ, ಸಾಯಂ ಸಂಧ್ಯಾದಲ್ಲಿ ಶಿವನು ಒಲಿಯುತ್ತಾನೆ ಎಂದು ಪುರಾಣ ಹೇಳುತ್ತದೆ. (ಸೃಷ್ಟಿ–ಸ್ಥಿತಿ–ಲಯ)

ಸಂಧ್ಯಾವಂದನೆ ಒಂದು ಮರದ ಬೇರಾದರೆ, ಉಳಿದ ಪೂಜಾಕ್ರಮಗಳೆಲ್ಲಾ ಆ ವೃಕ್ಷದ ರೆಂಬೆ–ಕೊಂಬೆಗಳೆನಿಸುತ್ತವೆ. ಸಂಧ್ಯಾವಂದನೆ ಇಲ್ಲದೆ ಅಂತಃಕರಣ ಶುಚಿಯಾಗುವುದಿಲ್ಲ. ವಿಶೇಷ ಪೂಜಾದಿನಗಳ, ಧಾರ್ಮಿಕ ಕಾರ್ಯಕ್ರಮಗಳ ಮೊದಲು ಆಚಮನ, ಸಂಧ್ಯಾವಂದನೆ ಮಾಡುವುದು ಮುಖ್ಯವಾಗುತ್ತದೆ. ಸಂಧ್ಯಾವಂದನೆ ಶಕ್ತಿದೇವತೆಯಾದ ಗಾಯತ್ರಿಯ ಮಂತ್ರಜಪ ಮನಸ್ಸಿಗೆ ಹಿತ ಮತ್ತು ನೆಮ್ಮದಿ ತರುತ್ತದೆ.



■ ಅಶೋಕ್‌ಕುಮಾರ್

# ಬುದ್ಧಿವಂತ ನರಿ – ಮಕ್ಕಳ ನೀತಿಕಥೆ

ಒಂದು ದಟ್ಟವಾದ ಕಾಡು ಇತ್ತು. ಆ ಕಾಡಿನಲ್ಲಿ ನರಿಯೊಂದು ವಾಸವಾಗಿತ್ತು. ಹಸಿವಿನಿಂದ ಆಹಾರ ಹುಡುಕುತ್ತಿದ್ದಾಗ ನರಿಗೆ ಗುಹೆಯೊಂದು ಕಾಣಿಸಿತು. ಗುಹೆಯ ಬಳಿಗೆ ಹೋಗುವ ಮುನ್ನ, ಸಿಂಹದ ಹೆಜ್ಜೆಗಳ ಗುರುತು ಇರುವುದನ್ನು ಗಮನಿಸಿತು. ಗುಹೆಯೊಳಗೆ ಸಿಂಹವಿರಬಹುದೆಂದು ಶಂಕಿಸಿ, ನಿಜ ತಿಳಿಯಲು ಉಪಾಯವೊಂದು ಹೂಡಿತು. "ಓ ಗುಹೆಯೇ, ಕ್ಷೇಮವೇ" ಎಂದು ಜೋರಾಗಿ ಕೂಗಿತು.

ಗುಹೆಯೊಳಗಿದ್ದ ಸಿಂಹಕ್ಕೆ ನರಿಯ ಕೂಗು ಕೇಳಿಸಿತು.

ಗುಹೆಯು ಉತ್ತರ ನೀಡದೆಂದು ಕೂಡ ನರಿಗೆ ತಿಳಿದಿತ್ತು.

ನರಿಯನ್ನು ಗುಹೆಯೊಳಗೆ ಕರೆಯಲು ಸಿಂಹ ಯೋಚಿಸಿತು.

ಗುಹೆಯು ಉತ್ತರಿಸಿದಂತೆ, "ಕ್ಷೇಮ ನರಿಯಣ್ಣ, ಒಳಗೆ ಬಾ" ಎಂದಿತು. ಗುಹೆಯೊಳಗೆ ಸಿಂಹವಿರುವುದು ನರಿಗೆ ಖಚಿತವಾಯಿತು. ಕಾಲಿಗೆ ಬುದ್ಧಿ ಹೇಳಿತು.

ನೀತಿ : ಅಪಾಯ ಬಂದಾಗ ಉಪಾಯದಿಂದ ಪಾರಾಗಬೇಕು. ಶಕ್ತಿಯಿಲ್ಲದಿದ್ದರೆ ಯುಕ್ತಿಯಿಂದ ಗೆಲ್ಲಬೇಕು. ಶಕ್ತಿಗಿಂತ ಯುಕ್ತಿ ಲೇಸು.



■ ಛಾಯಾ ಭಗವಾನ್



# ಮಹಾಶಿವರಾತ್ರಿ

‘ಮಹಾ ಶಿವರಾತ್ರಿ’ ಎಂಬ ಹೆಸರೇ ತಿಳಿಸುವಂತೆ ರಾತ್ರಿಯಿಡೀ ಶಿವನ ಧ್ಯಾನ, ಪೂಜೆ, ಜಪ, ಆರಾಧನೆ, ಜಾಗರಣೆ, ಉಪವಾಸ ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳುವ ದಿನ. ಪ್ರತೀ ತಿಂಗಳ ಕೃಷ್ಣ ಪಕ್ಷದ ತ್ರಯೋದಶಿ ದಿನದ ಪ್ರದೋಷವು ಮಾಸ ಶಿವರಾತ್ರಿಯಾದರೆ, ಮಾಘ ಮಾಸದ ಆ ದಿನವನ್ನು ನಾವು ‘ಮಹಾಶಿವರಾತ್ರಿ’ ಎನ್ನುತ್ತೇವೆ.

‘ಶಿವ’ ಎಂದರೆ ಮಂಗಳ. ‘ರಾತ್ರಿ’ ಎಂದರೆ ತಮಸ್ಸು, ಕತ್ತಲು, ಅಜ್ಞಾನ. ‘ಮಹಾ’ ಎಂದರೆ ಶ್ರೇಷ್ಠ, ನಮಗಿರುವ ತಮೋಂಧಕಾರವಾದ ಅಜ್ಞಾನವನ್ನು ಹೋಗಲಾಡಿಸುವ ಜ್ಞಾನಪೂರ್ಣ ಮಂಗಳ ಮೂರ್ತಿಯ ಆರಾಧನೆಯೇ ‘ಮಹಾ ಶಿವರಾತ್ರಿ’. ತ್ರಯೋದಶಿಯ ಹದಿಮೂರು ಎಂಬುದು ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರೀಯ ಮತ್ತು ಮೂರು ಅಂತಃಕರಣ ವೃತ್ತಿಯಾದ ಮನಸ್ಸು, ಬುದ್ಧಿ, ಚಿತ್ತವನ್ನು ಒಳಗೊಂಡಿದೆ. ಮನಸ್ಸಿನ ಸಂಶಯವಿಲ್ಲದೆ, ಬುದ್ಧಿಯ ತರ್ಕವಿಲ್ಲದೆ, ಚಿತ್ತದ ದೃಢತೆಯಿಂದ ಚಿತ್ತಶುದ್ಧಿಯಾದಾಗಲೇ ಶಿವರಾತ್ರಿಯ ಸಾರ್ಥಕತೆ ಆಗುವುದು.

ಜಾಗರಣೆ ಮಾಡುವ ಉದ್ದೇಶ ಬರೀ ನಿದ್ದೆ ಕೆಡುವುದು, ವ್ಯರ್ಥ ಸಮಯ ಹರಣ ಮಾಡುವುದು, ಮನೋರಂಜನೆ ಆಗಿರಬಾರದು. ‘ಜಾಗರಣೆ’ ಎಂದರೆ ಜಾಗ್ರತ, ಎಚ್ಚರವಾಗಿರುವುದು. ನಮಗಿರುವ ಜ್ಞಾನವು ಯಾವಾಗಲೂ ಸತ್ ಚಿಂತನೆಯಲ್ಲೇ ನೆಲೆ ನಿಂತು ಪ್ರಾಜ್ಞರಾಗುವ ವಿಧಾನವೇ ಎಚ್ಚರ ಸ್ಥಿತಿ. ಉಪವಾಸ ಮಾಡುವುದು ಶಿವರಾತ್ರಿಯ ವಿಶೇಷಗಳಲ್ಲೊಂದು ವಿಶೇಷ. ಊಟ, ತಿಂಡಿ, ಕೆಲವು ವೇಳೆ ನೀರು ಸಹಾ ತೆಗೆದುಕೊಳ್ಳದಿರುತ್ತಾರೆ. ‘ಉಪ’ ಎಂದರೆ ಹತ್ತಿರ. ‘ವಾಸ’ ಎಂದರೆ ಇರುವುದು. ದೈವದ ಬಳಿಯೇ ಅಂದರೆ ದೈವಚಿಂತನೆ, ಆತ್ಮಚಿಂತನೆಯಲ್ಲೇ ಇರುವುದು ಉಪವಾಸ ಎನಿಸುತ್ತದೆ. ನಮ್ಮ ನೋಟವು ಬಹಿರ್ಮುಖವಾಗದೆ ಅಂತರ್ಮುಖ ವಾಗುತ್ತಾ ಹೋಗುವುದು ಉಪವಾಸ, ಜಾಗರಣೆ ಎನಿಸುತ್ತದೆ. ಇಂದ್ರಿಯ ನಿಗ್ರಹ, ಮನೋನಿಗ್ರಹಗಳು ಅಂದಿನ ಒಂದೇ ದಿನಕ್ಕೆ ಸೀಮಿತವಾಗಿರದೆ ಸದಾ ಮಾಡುವ ಅಭ್ಯಾಸ ಆಗಬೇಕು. ಈ ಸತ್‌ಕಾರ್ಯಗಳನ್ನು ಮಾಡಲು ಇಂತಹ ಪವಿತ್ರ ದಿನಗಳನ್ನು ನಾಂದಿಯಾಗಿ ಮಾಡಿಕೊಳ್ಳಬಹುದು. ಮಾಸ ಶಿವರಾತ್ರಿಗಳಲ್ಲೂ ಇದನ್ನು ಆಚರಿಸಬೇಕು. ಆದರೆ, ಈಗಿನ ದೈನಂದಿನ ವ್ಯಾವಹಾರಿಕ ಜಗತ್ತಿನಲ್ಲಿ ಮುಳುಗಿರುವ ನಾವು ಇದನ್ನು ಆಚರಿಸಲಾಗದಿದ್ದರೂ ಮಹಾಶಿವರಾತ್ರಿಯಂದು ಆಚರಿಸಿ ಶಿವಕೃಪೆಗೆ ಪಾತ್ರರಾಗೋಣ.

ಪಂಚಭೂತಗಳ ಒಡೆಯನಾದ ಆ ಸದಾಶಿವನನ್ನು ‘ಭೂತನಾಥ’ ಎಂದು ಹೇಳುತ್ತೇವೆ. ಶಿವ ಪಂಚಾಕ್ಷರಿ ಮಂತ್ರವಾದ ‘ನಮಃಶಿವಾಯ’ ಇದನ್ನು ತಿಳಿಸುತ್ತದೆ. ನ=ನಭ (ಆಕಾಶ), ಮಃ=ಮಾರುತ (ಗಾಳಿ), ಶಿ=ಶಿಖ (ಅಗ್ನಿ), ವಾ=ವಾರಿಧಿ (ನೀರು), ಯ=ಯಜ (ಭೂಮಿ). ಈ ಪಂಚಭೂತಗಳ ಆರಾಧನೆಯೇ ಶಿವನಾಮ ಸ್ಮರಣೆ, ಶಿವಜಪ ಎನಿಸುತ್ತದೆ.

‘ಮನಸ್ಸಿನಂತೆ ಮಹಾದೇವ’ ಎನ್ನುವಂತೆ ಮನಸ್ಸು ಪ್ರಶಾಂತವಾಗಿದ್ದರೆ ವದನವು ಪ್ರಸನ್ನವಾಗಿರುತ್ತದೆ. ಪ್ರಶಾಂತನು ಹರನಾದರೆ, ಪ್ರಸನ್ನನು ಹರಿ. ಆದ್ದರಿಂದ ಹರಿ–ಹರರಲ್ಲಿ ಭೇದ ಎಣಿಸಬಾರದು.

ಶಿವನಿಗೆ ಮೂರ್ತಿಪೂಜೆ ಇಲ್ಲ. ಏಕೆಂದರೆ ಮಂಗಳನಾದ ಶಿವತತ್ವವನ್ನು ಒಂದೇ ರೂಪಿನಿಂದ ಗುರುತಿಸದೆ ಎಲ್ಲೆಡೆ ಗುರುತಿಸಬೇಕು ಎಂದು ಅರಿಯಲು ಲಿಂಗ (ಗುರುತು) ರೂಪದಲ್ಲಿ ಪೂಜಿಸುವುದು ರೂಢಿಯಲ್ಲಿದೆ.

ಕ್ಷೀರಸಾಗರ ಮಥನ ಕಾಲದಲ್ಲಿ ಮೊದಲು ಬಂದ ಹಾಲಾಹಲವನ್ನು ಭುಂಜಿಸಿದ ಶಂಕರ ವಿಷವನ್ನು ಗಂಟಲಿನಲ್ಲೇ ಇಟ್ಟುಕೊಂಡನು. ಇದರ ಮರ್ಮ ಯಾವುದಾದರೂ ಸಂಕಟಕರ, ವಿಷಮಯ ವಿಚಾರ ಸಂಭವಿಸಿದಾಗ ಅದನ್ನು ಹೊರಹಾಕಿ ಸುತ್ತಲಿನವರಿಗೆ ನೋವುಂಟು ಮಾಡದೆ, ಅಥವಾ ನುಂಗಿ ತೊಂದರೆ ಮಾಡಿಕೊಳ್ಳದೆ ಸಮತ್ವದಲ್ಲಿ ಇಟ್ಟುಕೊಳ್ಳಬೇಕೆಂಬ ವಿಷಯ ತಿಳಿಸಿದ ಶಿವನನ್ನು ಮಹಾವಿಷ್ಣು ‘ಮಹಾದೇವ’ ಎಂದು ಕರೆದನು. (ಹೊರ ಹಾಕಿದಾಗ ಕೋಪ ಪ್ರಕಟವಾಗಿ, ಒಳನುಂಗಿದಾಗ ದ್ವೇಷ ಪ್ರಾರಂಭವಾಗುತ್ತದೆ.) ಅಂತಹ ಹಾಲಾಹಲದ ತಾಪ ಕಡಿಮೆ ಮಾಡಿಕೊಳ್ಳಲು ಹಿಮಗಿರಿಯಲ್ಲೇ ತಂಪಾಗಿ ನೆಲೆಸಿ, ಮೈಗೆ ಬೂದಿ ಬಳಿದುಕೊಂಡು, ತಲೆಯಲ್ಲೇ ತಿಳಿ ಗಂಗೆ, ತಂಪಾದ ಚಂದ್ರನನ್ನು ಧರಿಸಿ, ಕುತ್ತಿಗೆಗೆ ತಣ್ಣನೆಯ ಹಾವು ಸುತ್ತಿಕೊಂಡಿರುವ ಆ ಮಹೋಹರನನ್ನು ಆರಾಧಿಸುವ ನಾವೇ ಧನ್ಯರು.


ಶಿವನ ಸಂಸಾರದ ವೈಶಿಷ್ಟ್ಯ ಬಣ್ಣಿಸಲಾಗದು. ಶಿವನ ವಾಹನ ವೃಷಭ, ಪತ್ನಿ ಪಾರ್ವತಿಯ ವಾಹನ ಸಿಂಹ ತದ್ವಿರುದ್ಧ ಸ್ವಭಾವಗಳು, ಮಗ ಗಣಪನ ವಾಹನ ಇಲಿಯಾದರೆ, ಷಣ್ಮುಖನ ವಾಹನ ನವಿಲು ವೈರಿ ಸ್ವಭಾವದವು. ಇಂತಹ ವಿರೋಧಾಭಾಸಗಳ ನಡುವೆ ಸುಖ ಸಂಸಾರ ಮಾಡುವ ರೀತಿ ಜಗತ್ತಿಗೆ ಮಾದರಿ.

ಶಿವ–ಪಾರ್ವತಿಯನ್ನು ಆದಿ ದಂಪತಿಗಳೆನ್ನುತ್ತಾರೆ. ಶಿವನು ತನ್ನ ಶರೀರದ ಅರ್ಧ ಭಾಗವನ್ನು ಪಾರ್ವತಿಗೆ ಕೊಟ್ಟು ಶಿವ–ಶಕ್ತಿ ಬೇರೆಯಲ್ಲ ಎಂಬ ತತ್ತ್ವದ ಪ್ರತಿಪಾದನೆ ಮಾಡಿದ್ದಾನೆ.

ಇವುಗಳನ್ನೆಲ್ಲಾ ನೆನೆದು ಮನೆಮನೆಯೂ ಸಂತೋಷ, ಸುಖ, ಶಾಂತಿಯ ನೆಲೆಯಾದ ಕೈಲಾಸವಾಗಲು ಎಲ್ಲರೂ ಪಣತೊಟ್ಟು ಶ್ರಮಿಸೋಣ.

**ಹರ ನಮಃ ಪಾರ್ವತಿ ಪತಯೇ ಹರ ಹರ ಮಹಾದೇವ ಜೈ**

■ **ಲಲಿತಾ ಆರ್. ರಮೇಶ್**



## ಶ್ರದ್ಧಾಂಜಲಿ

ನಮ್ಮ ಸಂಘದ ಸದಸ್ಯರಾಗಿದ್ದ **ತಟ್ನಹಳ್ಳಿ ಛಾಯಾಪತಿ**ಯವರು ದಿನಾಂಕ: 25–9–2013ರಂದು ನಮ್ಮನ್ನಗಲಿರುತ್ತಾರೆ. ಸಂಘವು ದಿವಂಗತರಿಗೆ ಅಶ್ರುತರ್ಪಣ ಅರ್ಪಿಸುತ್ತಾ ಅವರ ಕುಟುಂಬದ ಸದಸ್ಯರಿಗೆ ಸಾಂತ್ವನ ಕೋರುತ್ತದೆ.



# ಅಡುಗೆ

## ರಾಗಿಮಾಲ್ಟ್ (Malt)

**ಬೇಕಾಗುವ ಸಾಮಗ್ರಿಗಳು :**

ರಾಗಿ 200 ಗ್ರಾಂ, ಗೋಧಿ 100 ಗ್ರಾಂ
ಕಡಲೇಕಾಯಿ ಬೀಜ 100 ಗ್ರಾಂ, ಕಡಲೇಕಾಳು 100 ಗ್ರಾಂ
ಹೆಸರುಕಾಳು 100 ಗ್ರಾಂ, ಅಕ್ಕಿ 100 ಗ್ರಾಂ
ಸಬ್ಬಕ್ಕಿ 100 ಗ್ರಾಂ, ಹುರಿಗಡಲೆ 100 ಗ್ರಾಂ
ಬಾದಾಮಿ 8 ರಿಂದ 10 ಗ್ರಾಂ

**ಮಾಡುವ ವಿಧಾನ :**

ಒಲೆಯನ್ನು ಹಚ್ಚಿ ಬಾಣಲೆಯಲ್ಲಿ ರಾಗಿ, ಗೋದಿ, ಕಡಲೇಕಾಯಿ ಬೀಜ, ಕಡಲೇಕಾಳು, ಹೆಸರುಕಾಳು, ಅಕ್ಕಿ ಹಾಗೂ ಸಬ್ಬಕ್ಕಿಯನ್ನು ಬೇರೆ ಬೇರೆಯಾಗಿ ಕೆಂಪಗೆ ಹುರಿದುಕೊಳ್ಳಬೇಕು. (ಹುರಿಗಡಲೆಯನ್ನು ಹುರಿಯು ವಂತಿಲ್ಲ) ತಣ್ಣಗಾದ ಮೇಲೆ ಈ ಎಲ್ಲಾ ಮೇಲ್ಕಂಡ ಸಾಮಗ್ರಿಗಳನ್ನು ಚೆನ್ನಾಗಿ ಬೆರೆಸಿ ಬೀಸಿಸಬೇಕು. (ಬಾದಾಮಿ ಸಮೇತ) ಈ ಮಿಶ್ರಣದ ಪುಡಿಯನ್ನು ವಿವಿಧ ರೀತಿಯಲ್ಲಿ ಸೇವಿಸಬಹುದು:

1. ಒಂದು ಲೋಟ ಹಾಲಿಗೆ 1–2 ಚಮಚ ಪುಡಿಯನ್ನು ಬೆರೆಸಿ ಕುಡಿಯಬಹುದು. ಇದು ಒಂದು High protein & High fibre drink.
2. ಈ ಹಿಟ್ಟಿಗೆ ಕಾಯಿತುರಿ, ಬೆಲ್ಲ, ಸ್ವಲ್ಪ ತುಪ್ಪ ಹಾಕಿ ಹುರಿಹಿಟ್ಟಿನ ಹದದಲ್ಲಿ ಕಲೆಸಿ ಸೇವಿಸಬಹುದು. ಇದು ಒಂದು Healthy evening snack.

★ ★ ★



■ ಸರ್ವಮಂಗಳ ಶ್ರೀನಿವಾಸ್

## ಹಾಲು ಮೆಣಸಿನಸಾರು

**ಬೇಕಾದ ಸಾಮಗ್ರಿಗಳು :**

ಉದ್ದಿನಬೇಳೆ, ಕರಿಮೆಣಸು + ಇಂಗು
ಒಣಕೊಬ್ಬರಿ, 1 ಬಟ್ಟಲು ಹಾಲು

**ಮಾಡುವ ವಿಧಾನ :**

ಒಂದು ಬಾಣಲೆಗೆ ಮೊದಲು ಸ್ವಲ್ಪ ತುಪ್ಪ ಹಾಕಿ, ಅದಕ್ಕೆ ಇಂಗು, ಉದ್ದಿನಬೇಳೆ, ಮೆಣಸು ಹಾಕಿ ಕೆಂಪಗೆ ಹುರಿಯಿರಿ, ನಂತರ ಒಣಕೊಬ್ಬರಿ ತುರಿಹಾಕಿ ಮಿಕ್ಸ್‌ರ್‌ನಲ್ಲಿ ನುಣ್ಣಗೆ ರುಬ್ಬಿರಿ. ರುಬ್ಬಿರುವ ಮಸಾಲೆ ಮಿಶ್ರಣವನ್ನು ನೀರಿನಲ್ಲಿ ಕಲಿಸಿ, ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಹಾಕಿ, ಕರಿಬೇವು ಹಾಕಿ, ಒಲೆ ಮೇಲಿಟ್ಟು ಕುದಿಸಿರಿ, ನಂತರ ಒಲೆಯಿಂದ ಇಳಿಸಿ ಅದಕ್ಕೆ ತುಪ್ಪ, ಸಾಸಿವೆ ಒಗ್ಗರಣೆ ಹಾಕಿ, ಒಂದು ಕಪ್ ಹಾಲು ಹಾಕಬೇಕು, ನಂತರ ಕೊತ್ತಂಬರಿ ಸೊಪ್ಪಿನ ತುಂಡುಗಳನ್ನು ಹಾಕಿ ಮುಚ್ಚಿಡಿ, ಇದು ಚಳಿಗಾಲಕ್ಕೂ ಮತ್ತು ಬಾಣಂತಿಗೂ ಬಹಳ ಒಳ್ಳೆಯದು.

**ಶ್ರದ್ಧಾಂಜಲಿ**

ನಮ್ಮ ಸಮುದಾಯದ ಹಿರಿಯ ಸದಸ್ಯೆ
ಶ್ರೀಮತಿ ಅಲಮೇಲಮ್ಮ ನಾಗೇಂದ್ರರವರು (95) ಇತ್ತೀಚೆಗೆ ನಮ್ಮಗಲಿದ್ದಾರೆ.
ಸಂಘವು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ.

## ಮೆಂತ್ಯೆ ಸೊಪ್ಪಿನ ಅನ್ನ

**ಬೇಕಾದ ಸಾಮಗ್ರಿಗಳು :**

ಮೆಂತ್ಯೆದ ಸೊಪ್ಪು ದೊಡ್ಡದು ಎರಡು ಕಟ್ಟು
ಇಂಗು + ಅರಿಶಿನಪುಡಿ, ಕಡಲೆಬೇಳೆ ನೆನೆಸಿದ್ದು
ಹಸಿಮೆಣಸಿನಕಾಯಿ, ನಿಂಬೆರಸ + ಅನ್ನ
ಒಗ್ಗರಣೆಗೆ : ಎಣ್ಣೆ, ಉದ್ದಿನಬೇಳೆ, ಕಡಲೆಬೇಳೆ

**ಮಾಡುವ ವಿಧಾನ :**

ಮೊದಲು ಅನ್ನವನ್ನು ಮಾಡಿ ಅದನ್ನು ಆರಲು ಬಿಡಿ, ಮೆಂತ್ಯೆಸೊಪ್ಪನ್ನು ಸಣ್ಣದಾಗಿ ಹೆಚ್ಚಿ, ಚೆನ್ನಾಗಿ ತೊಳೆದು ಬಸಿಹಾಕಿ, ನಂತರ ನೆನೆಸಿರುವ ಕಡಳೆಬೇಳೆ, ಹಸಿಮೆಣಸಿನಕಾಯಿ, ಇಂಗು, ಅರಿಶಿನ ಎಲ್ಲವನ್ನೂ ಮಿಕ್ಸ್‌ರ್‌ನಲ್ಲಿ ಹಾಕಿ ಸ್ವಲ್ಪ ತರಿಯಾಗಿ ರುಬ್ಬಿಕೊಳ್ಳಿ. ರುಬ್ಬಿದ ಮಿಶ್ರಣಕ್ಕೆ ತೊಳೆದು ಹಚ್ಚಿಟ್ಟಿರುವ ಮೆಂತ್ಯೆಸೊಪ್ಪು ಸೇರಿಸಿ ಕಲೆಸಿರಿ.

ನಂತರ ಒಲೆ ಮೇಲೆ ಬಾಣಲೆ ಇಟ್ಟು ಸ್ವಲ್ಪ ಎಣ್ಣೆ ಜಾಸ್ತಿ ಹಾಕಿ, ಅದಕ್ಕೆ ಸಾಸಿವೆ, ಉದ್ದಿನಬೇಳೆ, ಕಡಲೆಬೇಳೆ, ಇಂಗು, ಅರಿಶಿನ ಹಾಕಿ ಸಾಸಿವೆ ಸಿಡಿದು, ಉದ್ದಿನಬೇಳೆ, ಕಡಲೆಬೇಳೆ ನಸುಕೆಂಪು ಆದಮೇಲೆ, ಅದಕ್ಕೆ ರುಬ್ಬಿದ ಮತ್ತು ಮೆಂತ್ಯೆಸೊಪ್ಪು ಸೇರಿಸಿ ಕಲಿಸಿ ಇಟ್ಟಿರುವ ಮಿಶ್ರಣವನ್ನು ಒಗ್ಗರಣೆಗೆ ಹಾಕಿ ಚೆನ್ನಾಗಿ ಹಸಿವಾಸನೆ ಹೋಗಿ ಬೇಯುವ ತನಕ ಬಾಡಿಸಿರಿ, ನಂತರ ಆ ಮಿಶ್ರಣಕ್ಕೆ ನಿಂಬೆಹಣ್ಣಿನ ರಸ ಸೇರಿಸಿ, ಚೆನ್ನಾಗಿ ಕೆದಕಿ, ಆನಂತರ ಆರಿಸಿ ಇಟ್ಟಿರುವ ಅನ್ನವನ್ನು ಆ ಮಿಶ್ರಣಕ್ಕೆ ಕಲಿಸಿದರೆ ರುಚಿಕರವಾದ ಮೆಂತ್ಯೆಸೊಪ್ಪಿನ ಅನ್ನ ರೆಡಿಯಾಗುತ್ತದೆ.

ಸೂಚನೆ: ಇದೇ ತರಹ ಗೋರಿಕಾಯಿಯನ್ನು ಬಿಡಿಸಿ, ಬೇಯಿಸಿ ನಂತರ ಕಡಲೆಬೇಳೆ, ಹಸಿಮೆಣಸಿನಕಾಯಿ, ಇಂಗು, ಅರಿಶಿನ ರುಬ್ಬಿದ ಮಿಶ್ರಣಕ್ಕೆ ಬೇಯಿಸಿದ ಗೋರಿಕಾಯಿ ಮಿಶ್ರಣ ಮಾಡಿ ಒಗ್ಗರಣೆ ಮಾಡಿ ನಿಂಬೆರಸ ಸೇರಿಸಿ ಅನ್ನಕ್ಕೆ ಕಲಿಸಿರಿ.

★ ★ ★

## ಡ್ರೈಫ್ರೂಟ್ ಒಬ್ಬಟ್ಟು

**ಬೇಕಾದ ಸಾಮಾಗ್ರಿಗಳು :**

ಬಾದಾಮಿ, ಗೋಡಂಬಿ, ಹಾಲು, ಸಕ್ಕರೆ, ಮೈದಾ + ಎಣ್ಣೆ
ಏಲಕ್ಕಿಪುಡಿ.

**ಮಾಡುವ ವಿಧಾನ :**

ಬಾದಾಮಿ, ಗೋಡಂಬಿ ಹಾಲು ಹಾಕಿ ಮಿಕ್ಸ್‌ರ್‌ನಲ್ಲಿ ನುಣ್ಣಗೆ ರುಬ್ಬಿ ನಂತರ ಒಲೆಯ ಮೇಲೆ ಪಾತ್ರೆ ಇಟ್ಟು ಹಾಲು ಹಾಕಿ, ರುಬ್ಬಿದ ಮಿಶ್ರಣ ಸೇರಿಸಿ ಸಕ್ಕರೆ, ಏಲಕ್ಕಿಪುಡಿ ಹಾಕಿ, ಸ್ವಲ್ಪ ಪಾಯಸದ ತರಹ ಗಟ್ಟಿ ಮಾಡಿರಿ. (ಮೊದಲೇ ಮೈದಾ ಹಿಟ್ಟನ್ನು ಕಲಿಸಿ ಇಟ್ಟಿರಿ) ಮೈದಾಹಿಟ್ಟಿನ ಕಲಿಸಿದ ಕಣಕವನ್ನು ಪೂರಿ ತರಹ ಒತ್ತಿ ಎಣ್ಣೆಯಲ್ಲಿ ಕರಿದು, ಅದಕ್ಕೆ ಹಾಲಿನ ಮಿಶ್ರಣ ಹಾಕಿ ಬಿಸಿಯಾಗಿರುವಾಗಲೇ ತಿನ್ನಲು ಕೊಡಿ.

■ ಛಾಯಾ ಭಗವಾನ್

**ಹಿತನುಡಿ**

*ಭಾವಿಸುವ ಮನಸ್ಸು ಚೊಕ್ಕಟವಾಗಿರಲಿ*
*ನೋಡುವ ದೃಷ್ಟಿ ನಿರ್ಮಲವಾಗಿರಲಿ*
*ಕೇಳುವ ಕಿವಿ ಎಚ್ಚರಿಕೆಯಿಂದಿರಲಿ*
*ನುಡಿಯುವ ನಾಲಿಗೆ ಹಿಡಿತದಲ್ಲಿರಲಿ*
*ಮಾಡುವ ಕೈಗಳು ಮಡಿಯಿಂದಿರಲಿ*

*ವ್ಯಕ್ತಿಯಲ್ಲಿ ಸುಪ್ತವಾಗಿರುವ ದಿವ್ಯತೆಯನ್ನು ಸುವ್ಯಕ್ತಗೊಳಿಸುತ್ತದೆ.*

■ ಆರ್.ಎನ್. ವೆಂಕಟಸುಬ್ಬರಾವ್

## ಸಂಕ್ರಾಂತಿಯ ಮಹತ್ವ

ಹೊಸ ವರ್ಷದ ಮೊದಲನೆಯ ಹಬ್ಬ ಸಂಕ್ರಾಂತಿ
ತರುವುದು ರೈತರಿಗೆ ಫಸಲಿನ ಸಂತಸದ ಕ್ರಾಂತಿ
ಹೊಸ ಫಸಲಿನಿಂದ ತಯಾರಿಸುವರು ಎಳ್ಳು-ಬೆಲ್ಲ
ಹಂಚುವರು ಅದನ್ನು ಆತ್ಮೀಯರಿಗೆಲ್ಲಾ ॥1॥

ಚಳಿಗಾಲದ ಈ ದಿನ ತಯಾರಿಸುವರು ಹುಗ್ಗಿ
ಈ ರೀತಿ ಆಚರಿಸುವರು ಅವರು ಸುಗ್ಗಿ
ದನಕರುಗಳಿಗೆ ಅಲಂಕರಿಸಿ ಹಾರಿಸುವರು ಕಿಚ್ಚು
ಮಕ್ಕಳಿಗೆ ಕಬ್ಬು-ಎಲಚಿಹಣ್ಣುಗಳನ್ನು ಇಟ್ಟು ಆರತಿ ಅವರ ಹೆಚ್ಚು ॥2॥

ಆರೋಗ್ಯ ದೃಷ್ಟಿಯಿಂದ ನೋಡಿದಲ್ಲಿ ಇದು ಅರ್ಥಪೂರ್ಣ
ಎಳ್ಳು ನೀಡುವುದು ತೈಲದ ಅಂಶ ಸಂಪೂರ್ಣ
ಬೆಲ್ಲ ನೀಡುವುದು ಕಬ್ಬಿಣದ ಖನಿಜಾಂಶ
ಇದು ಒಟ್ಟಿನಲ್ಲಿ ಆರೋಗ್ಯದ ಮುಖ್ಯ ಅಂಶ ॥3॥

ಹಿಂದೂ ಧರ್ಮದ ಎಲ್ಲಾ ಹಬ್ಬವೂ ನೀಡುವುದು ಸಂತೋಷ
ಇದು ಎಲ್ಲರ ಐಕ್ಯಮತ್ಯದ ಒಂದು ಹರುಷ
ಇದುವೇ ಆನಂದದ ಅನುಭೂತಿ
ನೀಡುವುದೆಲ್ಲರಿಗೆ ಜೀವನದಲಿ ಸುಖ-ಶಾಂತಿ ॥4॥

ಬೃಹಚ್ಚರಣ ಸಂಘಕ್ಕೆ ನೀಡಲಿ ಸಂತಸ
ನಮ್ಮ ಬಂಧುಗಳಲಿ ಹೊಂದಲಿ ಉಲ್ಲಾಸ
ಎಲ್ಲಾ ಹಬ್ಬಗಳು ನೀಡಲಿ ಅವರಿಗೆ ಸಂಭ್ರಮ
ಹೊಸ ವರುಷ ನೀಡಲಿ ಅವರಿಗೆ ಸುಖದ ಸಂಗಮ ॥5॥



■ ಕೆ.ಆರ್. ನಾಗರತ್ನ

## ಬದುಕಿನ ಅಕ್ಷರಮಾಲೆ...


ಅಕ್ಷಮ್ಯ ಅಪರಾಧಗಳ ಹೊತ್ತ ಜೀವನದಲಿ
ಆನೆ ನಡೆದುದೇ ದಾರಿ ಎಂದು
ಇಷ್ಟ ಬಂದಂತೆ ಪ್ರವರ್ತಿಸಿದರೆ
ಈಡೇರುವುದೇ ಮನದ ಬಯಕೆ?
ಉದರಕ್ಕಾಗಿ ಜೀವನದ ಹೋರಾಟ
ಊಟಕ್ಕಾಗಿ ಏನೆಲ್ಲ ಅವಾಂತರ
ಋಣ ಮಾಡಿಯಾದರೂ ಜೀವನಸಾಗಣೆ
ಎಣಿಕೆಯಲ್ಲದಷ್ಟು ಎಡರುಗಳು
ಏರುಪೇರುಗಳಿಗೆ ಮಿತಿಯಿಲ್ಲ
ಐಶ್ವರ್ಯಗಳಿಗೆ ಏನೆಲ್ಲ ಬವಣೆ
ಒಲವಿನ ರಹಸ್ಯ ತಿಳಿಯದೆ
ಓಡುತಿದೆ ಬದುಕಿನ ಚಕ್ರ
ಔದಾರ್ಯದ ಬದುಕಿಗೆ
ಅಂಕೆಯಲ್ಲಿದಷ್ಟು ಆತಂಕ
ಆಹಾ! ಏನಿದು ಬದುಕಿನ ಪರದಾಟ



■ ರಾಜಾಪುರ್ ರಾಜಗೋಪಾಲ್

## ಅನ್ನಸಂತರ್ಪಣಾ ನಿಧಿಗೆ ದಾನಿಗಳು

| *ಶ್ರೀಯುತರಾದ* | ₹ |
|---|---|
| ಕೆ. ಗುಂಡಪ್ಪ | 10,000/– |
| ಸಿ.ಎಸ್. ಶ್ರೀನಿವಾಸಮೂರ್ತಿ | 10,000/– |
| ಮೀನಾ ಎಸ್. ಮಣಿ | 5,000/– |
| ಆರ್.ಎನ್. ಹರಿಪ್ರಸಾದ್ | 4,000/– |
| ಜಿ.ಎಸ್. ವೇಣುಗೋಪಾಲ್ | 4,000/– |
| ಎಸ್. ವಿಶ್ವನಾಥನ್ | 4,000/– |
| ಶ್ರೀಮತಿ ಶಾರದ | 4,000/– |
| ಬಿ.ಸಿ. ರಾಮಮೂರ್ತಿ | 3,000/– |
| ಶಾರದಮ್ಮ | 2,500/– |
| ಬಿ.ಎಸ್.ಆರ್. ಪ್ರಸಾದ್ ಸಹೋದರರು | 1,500/– |
| ಟಿ.ಎ. ಗಿರೀಶ್ | 1,500/– |
| ಎ.ಆರ್. ಸತೀಶ್ | 1,500/– |
| ಶಶಿಧರ್ | 1,500/– |
| ರಾಮನ್ ರಮೇಶ್ | 1,500/– |
| ಶ್ರೀಹರಿ (ರಾಮಕೃಷ್ಣ) | 1,500/– |
| ಕುಮಾರಿ ಶ್ರೇಯ | 1,500/– |
| ಪದ್ಮ ಬಿ.ವಿ. | 1,500/– |
| ಆರ್.ಎಸ್. ಭಗವಾನ್ | 1,500/– |
| ಸೃಷ್ಟಿ ಅಶೋಕ್ | 1,500/– |
| ಆರ್. ಶ್ರೀಹರಿ | 1,500/– |



## ಶುಭ ವಿವಾಹ

ಸಂಘದ ಸದಸ್ಯ ಶ್ರೀ **ಕೆ.ಬಿ.ಎಸ್. ಶರ್ಮ** ಹಾಗೂ **ಶ್ರೀಮತಿ ಶಶಿಕಲಾ** ಅವರು ತಮ್ಮ ಪುತ್ರ **ಚಿ॥ ಭರತ್‌ಶರ್ಮ**ರವರನ್ನು **ಶ್ರೀ ಮಹಾಲಿಂಗಂ** ಹಾಗೂ **ಶ್ರೀಮತಿ ಸವಿತಾ**ರವರ ಪುತ್ರಿ **ಚಿ॥ ಸೌ॥ ಶುಭಾಷಿಣಿ** ಯವರೊಂದಿಗೆ ಇತ್ತೀಚೆಗೆ ಶಿವಮೊಗ್ಗ ನಗರದಲ್ಲಿ ವಿವಾಹ ನೆರವೇರಿಸಿದರು. ನೂತನ ವಧು-ವರರಿಗೆ 'ಬೃಹಚ್ಚರಣ' ಸಂಘವು ಶುಭ ಹಾರೈಸುತ್ತದೆ.

❖ ❖

ಸಂಘದ ಪೋಷಕ **ಬೆಟ್ಟಕೋಟೆ ರಾಮಸ್ವಾಮಿ**ಯವರ ಸಹೋದರ **ಶ್ರೀ ಬಿ.ಎಸ್. ಸೂರ್ಯಪ್ರಕಾಶ್** ದಂಪತಿಗಳು ತಮ್ಮ ಪುತ್ರ **ಚಿ॥ ಸತೀಶ್** ರವರನ್ನು **ಚಿ॥ ಸೌ॥ ಡಾ॥ ಅರ್ಚನಾ**ರವರೊಂದಿಗೆ ಇತ್ತೀಚೆಗೆ ವಿವಾಹ ನೆರವೇರಿಸಿದರು. ನೂತನ ವಧುವರರಿಗೆ 'ಬೃಹಚ್ಚರಣ' ಸಂಘ ಶುಭ ಹಾರೈಸುತ್ತದೆ.

## ಓದುಗರ ಪತ್ರಗಳು




*ಮಾನ್ಯ ಸಂಪಾದಕರೇ,*

ಅಕ್ಟೋಬರ್–ಡಿಸೆಂಬರ್ 2013ರ 'ಬೃಹಚ್ಚರಣ' ತ್ರೈಮಾಸಿಕ ಪತ್ರಿಕೆ ಬಹು ಸುಂದರವಾಗಿ ಬಂದಿದೆ. ಕಣ್ಣಿಗೆ ತಂಪಾದ ವರ್ಣ–ವಿನ್ಯಾಸವುಳ್ಳ ಪತ್ರಿಕೆಯಲ್ಲಿನ ಬರಹಗಳೂ ವಿಶೇಷವಾಗಿ ಮೂಡಿಬಂದಿದೆ. ಅಧ್ಯಕ್ಷರ ನುಡಿ, ಸಂಪಾದಕೀಯ, ಹಿರಿಯರ ಪರಿಚಯ, ಶುಭಾಶಯಗಳು, ಪ್ರವಾಸ ಕಥನದೊಂದಿಗೆ ಅದರ ಛಾಯಾಚಿತ್ರಗಳು, ವಾರ್ತಾಚಿತ್ರಗಳು, ವಿದ್ಯಾರ್ಥಿಗಳಿಗಾಗಿ ಲೇಖನ, ಕಲ್ಯಾಣೋತ್ಸವದ ವರದಿಯೊಂದಿಗೆ ಛಾಯಾಚಿತ್ರಗಳು, ನೆನಪಿನಾಳದ ಛಾಯಾಚಿತ್ರಗಳು, ಅಡುಗೆ, ಅಂಕಣ, ಕಥೆ, ನಗೆಬರಹ, ಕವಿತೆ, ಚುಟುಕ, ಸ್ತುತಿ, ಓದುಗರ ಪತ್ರಗಳು, ನಮ್ಮ ಭಾಷೆಯಲ್ಲಿ ಕಗ್ಗ ಹೀಗೆ ಇನ್ನೂ ಹಲವಾರು ಬರಹಗಳನ್ನು ಹೊಂದಿಬಂದಿರುವ ಪತ್ರಿಕೆ ಸೊಗಸಾಗಿದೆ. ಇದಕ್ಕಾಗಿ ತಗುಲಿದ ವೆಚ್ಚವೂ ಸಾಕಷ್ಟು ಹೆಚ್ಚಾಗಿರಬೇಕೆನ್ನಿಸುತ್ತದೆ.

ಅಧ್ಯಕ್ಷರ ನುಡಿಯಲ್ಲಿನ 'ನಿಮಗೆಲ್ಲಾ ಒಳ್ಳೆಯದಾಗಲಿ ಒಳ್ಳೆಯದೇ ಆಗುತ್ತದೆ' ಎಂಬ ಮಾತು ಮಾರ್ಮಿಕವಾಗಿದೆ. ಮತ್ತು ಮನ ತಟ್ಟುತ್ತದೆ. 'ವಿದ್ಯಾರ್ಥಿ ಲಕ್ಷಣಗಳು' ಎಂಬ ಲೇಖನದಡಿ ಬಂದಿರುವ ಸಕಲ ವಿಷಯಗಳು ಸರ್ವಕಾಲಕ್ಕೂ ವಿದ್ಯಾರ್ಜನೆಯ ಸಮಯದಲ್ಲಿ ಅನುಸರಿಸಲೇಬೇಕಾದ್ದು. ಉಪಾಧ್ಯಾಯರಾದ ಶ್ರೀ ಶ್ರೀನಿವಾಸಯ್ಯ ನವರಿಗೆ ವಂದನೆಗಳು. ಕಲ್ಯಾಣೋತ್ಸವದಲ್ಲಿ ಭಗವಂತನ ಮತ್ತು ಪಾಲ್ಗೊಂಡ ಪ್ರತಿ ದಂಪತಿಗಳ ಛಾಯಾಚಿತ್ರ ಬಹು ಸೊಗಸಾಗಿದೆ. ಶ್ರೀ ಕೆ.ಸಿ.ನಟರಾಜ್ ಮತ್ತು ಶ್ರೀ ಶಿವಕುಮಾರ್‌ರವರಿಗೆ ಅಭಿನಂದನೆಗಳೊಂದಿಗೆ ಧನ್ಯವಾದಗಳು.

ಪ್ರತಿಭಾ ಪುರಸ್ಕಾರವನ್ನು ಎಲ್ಲಾ ಪದವೀಧರರಿಗೂ ನೀಡುವ ನಿರ್ಧಾರ ಕೈಗೊಂಡಿರುವುದು ಶ್ಲಾಘನೀಯ.

ಧನ ಸಹಾಯ ನೀಡುವವರ ಪಟ್ಟಿ ಹೀಗೆ ಇನ್ನು ಬೆಳೆಯುವಂತಾಗಲಿ ಎಂದು ಹಾರೈಸುತ್ತೇನೆ. ಸ್ವಯಂ ಪ್ರೇರಿತ ದಾನಿಗಳು ಪ್ರತಿವರ್ಷ ಸಂಘಕ್ಕಾಗಿ ಕೊಡುವ ಕೊಡುಗೆಯು ಎಲ್ಲಾ ಸದಸ್ಯರಿಗೂ ಮಾದರಿಯಾಗಬೇಕು ಎಂದು ಸದಸ್ಯರಲ್ಲಿ ವಿನಂತಿಸುತ್ತೇನೆ. ಏಕೆಂದರೆ ಇಂತಹ ವರ್ಣರಂಜಿತ ಛಾಯಾಚಿತ್ರಗಳು, ಮುದ್ರಣ ಕಾಗದ, ಮುದ್ರಣದ ವೆಚ್ಚ ಇವುಗಳು ಸಂಘಕ್ಕೆ ಆರ್ಥಿಕವಾಗಿ ಹೊರೆಯಾಗ ಬಾರದೆಂದು ನನ್ನ ಅನಿಸಿಕೆ.

ಲೇಖನ ನೀಡುವ ಬರಹಗಾರರ ಛಾಯಾಚಿತ್ರದೊಂದಿಗೆ ಲೇಖಕರ ದೂರವಾಣಿ ಸಂಖ್ಯೆ ನೀಡುವುದು ಉಚಿತ. ಇದರಿಂದ ಲೇಖಕರಿಗೆ ವೈಯಕ್ತಿಕವಾಗಿ ಉತ್ತೇಜನ ನೀಡಬಹುದಾಗಿದೆ.

ಪತ್ರಿಕೆಯಲ್ಲಿ ಕೆಲವು ಕಡೆ ಮುದ್ರಣ ತಿದ್ದುಪಡಿ ಅವಶ್ಯಕತೆ ಇದೆ. ಸಂಪಾದಕ ಸಮಿತಿಗೆ ಹೃತ್ಪೂರ್ವಕ ಅಭಿನಂದನೆಗಳು.

ಧನ್ಯವಾದಗಳು



■ ರಮೇಶ್
ಮೊ: 9945199637

## ಅಭಿನಂದನಾ ಸಭೆ

ದಿನಾಂಕ 5–3–2014ರಂದು ಕಿತ್ತಿಗಾನಹಳ್ಳಿಯಲ್ಲಿ ನಡೆದ ನಾಗಾರಾಧನಾ ಸಮಾರಂಭದಲ್ಲಿ ಭಾಗವಹಿಸಿದ ಸ್ವಯಂ ಸೇವಕರಿಗೂ ಹಾಗೂ ಕ್ಯಾಲೆಂಡರ್‌ಗಳಿಗೆ ಪ್ರಾಯೋಜಕರಾಗಿ ಸೇವೆ ಸಲ್ಲಿಸಿದ ಮಹನೀಯರುಗಳಿಗೆ, ದಿನಾಂಕ 30–3–2014ರಂದು **"ಅಭಿನಂದನಾ"** ಕಾರ್ಯಕ್ರಮವನ್ನು ಸಂಘದ ಹಿರಿಯ ಸದಸ್ಯರಾದ ಪ್ರೊ. ಶ್ರೀ ಸೂರ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ 'ಅಭಿನವ ವಿದ್ಯಾತೀರ್ಥ' ಕಲ್ಯಾಣಮಂಟಪದ ಆವರಣದಲ್ಲಿ ನಡೆಸಲಾಯಿತು.








Book-Post

To,

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026.